
# ಶ್ರೀ ವಿಜಯದಾಸರಾಯ ಗುರುಭ್ಯೋ ನಮಃ

# ಕಂಕಣಾಕಾರ ಸುಳಾದಿಯ ಚಿಂತನೆಯ ಕೈಪಿಡಿ




**ಶ್ರೀ ವಿಜಯದಾಸರ ಕಂಕಣಾಕಾರ ಸುಳಾದಿಯೇ ಮೊದಲಾದ ಚಕ್ರಾಬ್ಜ ಮಂಡಲಕ್ಕೆ ಸಂಬಂಧಪಟ್ಟ ಸುಳಾದಿಗಳ ಆಧಾರದ ಮೇಲೆ ಚಿಂತನೆಯನ್ನು ಕೊಡಲಾಗಿದೆ.**


**ಸಂಗ್ರಹ, ಸಂಪಾದನೆ, ಪ್ರಕಾಶನ**
**ಶ್ರೀ ವಿಷ್ಣುತೀರ್ಥ ಪ್ರಕಾಶನ**
**ಕರ್ನೂಲು ಶ್ರೀನಿವಾಸಾಚಾರ್ಯ**

ಶ್ರೀ ವಿಜಯದಾಸರಾಯ ಗುರುಭ್ಯೋ ನಮಃ

# ಕಂಕಣಾಕಾರ ಸುಳಾದಿಯ ಚಿಂತನೆಯ ಕೈಪಿಡಿ

---


## ಕರ್ನೂಲು ಶ್ರೀನಿವಾಸಾಚಾರ್ಯ


---


ಶ್ರೀ ವಿಷ್ಣುತೀರ್ಥ ಪ್ರಕಾಶನ

ಚಾಮರಾಜ ಪೇಟೆ ಬೆಂಗಳೂರು

ಶ್ರೀ ವಿಜಯದಾಸರ ಕಂಕಣಾಕಾರ ಸುಳಾದಿ : ಕರ್ನೂಲು ಶ್ರೀನಿವಾಸಾಚಾರ್ಯ

© ಹಕ್ಕುಗಳು : ಕರ್ನೂಲು ಶ್ರೀನಿವಾಸಾಚಾರ್ಯ

ಪ್ರಥಮ ಮುದ್ರಣ : 2016

ಬೆಲೆ : ಅನುಸಂಧಾನಕ್ಕೆ ಇಡುವುದೇ ನೀವು ಕೊಡುವ ಬೆಲೆ

**ಛಾಯಾಕ್ಷರ ಜೋಡಣೆ:**

Concord Business Center
#141-2/1, 33 Cross, 7 Main, 4 Block
Jayanagar, Bangalore – 11
Mobile : 94480 59834
e-mail : concordbusinesscenter@gmail.com

**ಮುದ್ರಕರು:**

Ganaika Mudranalaya
#234/5 Narayanappa Garden, 2 Block,
4 Main, Thyagaraja Nagar, Bangalore – 28
Ph: 080 2676 1647
e-mail : ganaikamudranalaya@yahoo.co.in

**ಪ್ರತಿಗಳಿಗೆ ಸಂಪರ್ಕಿಸಿ**
**ಸಂಗ್ರಹ ಸಂಪಾದನೆ ಪ್ರಕಾಶನ**
**ಶ್ರೀ ವಿಷ್ಣುತೀರ್ಥ ಪ್ರಕಾಶನ**
**ಕರ್ನೂಲು ಶ್ರೀನಿವಾಸಾಚಾರ್ಯ**
Ph - +91 97410 08756
Website - www.kurnoolachar.com
Android Mobile App. - Kurnool Achars Chintana

# ವಿಜ್ಞಾಪನೆ

ಭಕ್ತ ಮಾಹಾಶಯರೆ!

ಶ್ರೀ ವಿಜಯದಾಸರು ತಾವು ರಚಿಸಿರುವ ಕಂಕಣಾಕಾರ ಸುಳಾದಿ ಹಾಗು ಕೆಲವು ಸುಳಾದಿಗಳಲ್ಲಿ ಚಕ್ರಾಬ್ಜ ಮಂಡಲದ ಬಗ್ಗೆ ವಿವರಣೆಯನ್ನು, ಚಿಂತನೆ ಮಾಡುವ ಕ್ರಮವನ್ನು ವಿವರವಾಗಿ ತಿಳಿಸಿದ್ದಾರೆ. ಅದನ್ನು ಸಂಗ್ರಹಿಸಿ ಸಜ್ಜನರು ನಿತ್ಯ ಅನುಷ್ಠಾನಕ್ಕೆ ಸುಲಭವಾಗಿ ತರುವ ಸಲುವಾಗಿ ಈ ಚಿಕ್ಕ ಕೈಪಿಡಿಯನ್ನು ಕೊಡಲಾಗಿದೆ. ಸಜ್ಜನರಾದ ತಾವೆಲ್ಲಾ ಅನುಸಂಧಾನ ಮಾಡಿ ಸಂತೋಷ ಪಟ್ಟರೆ ಶ್ರೀ ವಿಜಯ ರಾಯರಿಗೆ ಸಂತೋಷವಾಗುತ್ತದೆ. ಇದೊಂದೇ ಉದ್ದೇಶ್ಯವಾಗಿ ಈ ಕಿರುಹೊತ್ತಿಗೆಯನ್ನು ಕೊಡಲಾಗಿದೆ. ಇದಕ್ಕೆ ಅನುಸಂಧಾನಕ್ಕೆ ಇಡುವುದೇ ನೀವು ಕೊಡುವ ಬೆಲೆ.

ಈ ಪುಸ್ತಕ ಹೊರಬರಲಿಕ್ಕೆ ಕಾರಣರಾದ ಸೇವಾಕರ್ತರಾದ ಶ್ರೀಯುತ ಕಿರಣ್ ಮತ್ತು ಶ್ರೀಮತಿ ಚಂದ್ರಿಕ ದಂಪತಿಗಳು ಇವರಿಗೆ ಭಗವಂತ ಅನುಗ್ರಹ ಮಾಡಲಿ.

ಈ ಪುಸ್ತಕ ಹಾಗೂ ಚಕ್ರಾಬ್ಜ ಮಂಡಲ ಚಿತ್ರಪಟ ರೂಪ ರೇಖೆಯ ಯೋಜನೆಯನ್ನು ಮಾಡಿಕೊಟ್ಟ ಕಾನ್‌ಕಾರ್ಡ್ ಬ್ಯುಸಿನೆಸ್ ಸೆಂಟರ್‌ನ ಮಾಲಿಕರಾದ ಶ್ರೀಯುತ ಮನೋಹರ್ ಮತ್ತು ಶ್ರೀಯುತ ಯುದುನಂದನ್ ಅವರ ಕುಟುಂಬಗಳಿಗೆ ಭಗವಂತ ಅನುಗ್ರಹ ಮಾಡಲಿ.

ಈ ಪುಸ್ತಕ ಹಾಗೂ ಚಕ್ರಾಬ್ಜ ಮಂಡಲ ಚಿತ್ರಪಟ ಸುಂದರವಾಗಿ ಮುದ್ರಿಸಿಕೊಟ್ಟ ಗಣೈಕ ಪ್ರಿಂಟರ್ಸ್ ಅವರಿಗೆ ಭಗವಂತ ಅನುಗ್ರಹ ಮಾಡಲಿ.

– ಇತಿ
ಶ್ರೀ ಹರಿ ಭಕ್ತರ ದಾಸಾನು ದಾಸ
ಶ್ರೀ ಕರ್ನೂಲು ಶ್ರೀನಿವಾಸಾಚಾರ್ಯ

------------------

## ಮೊದಲನೆಯ ವಲಯ

------------------

ಅಂ

ಅಂತಾಯ ನಮಃ

**ಓಂ ಘೃಣಿಃ ಓಂ**

ಅಃ

ಅರ್ಧಗರ್ಭಾಯ ನಮಃ

**ರಾಗ ಭೈರವಿ ಧೃವ ತಾಳ**

ಕಂಕಣಾಕಾರವನ್ನು ಬರೆದು ಅದರ ಮಧ್ಯ ।
ಓಂಕಾರ ಎರಡು ಎಡ–ಬಲದಿ ರಚಿಸಿ ।
ಶಂಕೆ ಇಲ್ಲದೆ ನಡುವೆ ಘೃಣಿಯೆಂದು ಅಪಿಸಿ ಮೀ ।
ನಾಂಕನಯ್ಯನ ಪೀಠಸ್ಥಳವಿದೆಂದು ।
ಬಿಂಕದಲಿ ಸ್ವರದೊಳಗೆ ಕಡಿಯಣಾ ಸ್ವರವೆ ಎರಡಾ ।
ಲಂಕಾರವನೆ ಮಾಡಿ ಅದರ ಬಳಿಯ ।

**1.** ನನ್ನ ಹೃದಯ ಕಮಲದ ಕರ್ಣಿಕೆಯ **ಮೊದಲನೆಯ ವಲಯದಯಲ್ಲಿ** ಭಗವಂತನ ಪೀಠವಾದ, ಅಂದರೆ ನನ್ನ ಸ್ವರೂಪ ದೇಹದಲ್ಲಿ ನಿಂತಿರುವ, ಹೊರಗಿನ ಸೂರ್ಯಮಂಡಲ ಹಾಗು ನನ್ನ ಹೃದಯದಲ್ಲಿರುವ,

ಸೂರ್ಯಮಂಡಲ ಮಧ್ಯವರ್ತಿಯಾದ, ಘೃಣಿ ನಾಮಕನಾದ, ಕರುಣಾಮಯನಾದ, ಅನಿಷ್ಠ ನಿವಾರಕ, ಇಷ್ಟ ಪ್ರಾಪಕನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

2. ಹೃದಯಸ್ಥಾನ ಸ್ವರ್ಗ, ಅದಕ್ಕೆ ನಿಯಾಮಕರಾದ, ನನ್ನ ಮನಸ್ಸಿಗೆ ನಿಯಾಮಕರಾದ, ಇಂದ್ರ ಕಾಮರ ಅಂತರ್ಯಾಮಿ, ರುದ್ರಾಂತರ್ಗತ, ಮುಖ್ಯಪ್ರಾಣಾಂತರ್ಗತ 'ಗೋವಿಂದ' ಎಂಬ ಹೆಸರಿನಿಂದಿರುವ, ಸಕಲ ವೇದ ಪ್ರತಿಪಾದ್ಯನಾದ, ಪ್ರದ್ಯುಮ್ನ ರೂಪದಿಂದ ಅಭಿನ್ನನಾದ, ನನ್ನ ಬಿಂಬಮೂರ್ತಿಯೇ ನಿನಗೆ (ನಮೋ ನಮ:) ಅನಂತ ನಮಸ್ಕಾರಗಳು.

3. ಹೇ ಸ್ವಾಮಿ! ನನ್ನ ಮನಸನ್ನು, ನಾನಾ ವಿಷಯ ಭೋಗದ ಕಡೆಗೆ ಓಡಿಸಿ ನಿನ್ನ ಕಡೆಗೆ ಬಾರದಂತೆ ಮಾಡುವವ ಕಾಲನೇಮಿ. ಅವನನ್ನು ಓಡಿಸು. ಕೇವಲ ನಿನ್ನ ಪೂಜಾತ್ಮಕವಾದ, ಸತ್ಕಾಮನೆಗಳನ್ನು ಕೊಟ್ಟು ಅದರ ಮೂಲಕ ಸತ್ಸಾಧನೆಯನ್ನು ಮಾಡಿಸುವವರು ಇಂದ್ರ ಕಾಮರು. ಆದ್ದರಿಂದಲೇ ಅವರು 'ಅಕಾಮರೆಂದು' ಕರೆಸಿಕೊಳ್ಳುತ್ತಾರೆ. ಇಂಥಾ ಇಂದ್ರ ಕಾಮರ ಅಂತರ್ಯಾಮಿಯಾಗಿ ಈ ಪೀಠದಲ್ಲಿ ನೆಲಸಿ, ನನ್ನನ್ನು ಉದ್ಧಾರ ಮಾಡು ಹರಿಯೇ. ನಿನ್ನನುಗ್ರಹವಿಲ್ಲದೆ ನಿನ್ನ ಚಿಂತನೆ ನನಗೆ ಸರ್ವಥಾ ಬರುವುದಿಲ್ಲ. ನೀನೇ ಸ್ವತಂತ್ರ ನಾನಸ್ವತಂತ್ರ ಎಂಬ ಎಚ್ಚರ ಸದಾ ದಯಪಾಲಿಸು ಹರಿಯೇ.

4. ಹೇ ಬಿಂಬಮೂರ್ತೇ ಘೃಣಿಯೇ ನೀನೇ ಪ್ರಣವ ಪ್ರತಿಪಾದ್ಯನಾಗಿದ್ದೀಯಾ. ಸರ್ವತ್ರ ವ್ಯಾಪ್ತನಾಗಿದ್ದೀಯಾ. ನನ್ನಲ್ಲಿ ಇದ್ದ ನೀನೇ, ಸರ್ವತ್ರನಿಂತು, ಸಕಲ ಕಾರ್ಯ ಮಾಡಿ ಮಾಡಿಸುತ್ತಿದ್ದೀಯಾ ಎಂಬ ಒಳ ದೃಷ್ಟಿಯನ್ನು, ಸತತ ತತ್ವಾಭಿಮಾನಿ ದೇವತೆಗಳ ಮೂಲಕ ನನಗೆ ದಯಪಾಲಿಸು ಹರಿಯೇ.

5. ನನ್ನ ಬಾಯಿಂದ ಬರುವ ಎಲ್ಲಾ ಅಕ್ಷರಗಳೂ ಎಲ್ಲಾ ಶಬ್ದಗಳೂ ನಿನ್ನನ್ನೇ ಹೊಗಳುತ್ತವೆ, ಎಂಬ ಎಚ್ಚರ ದಯಪಾಲಿಸು. ನನ್ನ ಬಾಯಿಂದ ಹೊರಡುವ ಪ್ರತಿಯೊಂದು ಅಕ್ಷರ, ಪ್ರತಿಯೊಂದು ಶಬ್ದ ನಿನ್ನ ಪೂಜೆಯಾಗಲಿ ಹರಿಯೇ.

6. ಈ ವಲಯದ ಎರಡು ಪ್ರಣವಗಳ ಮಧ್ಯೆ ವಿರಾಜಿಸುವ, ಘೃಣಿನಾಮಕ ಬಿಂಬಮೂರ್ತಿಯೇ ನಿನಗೆ ಅಂ ಅಃ ಎಂಬ ಎರಡು ವರ್ಣಗಳಿಂದ ಅಲಂಕಾರವನ್ನು ಮಾಡುತ್ತಿದ್ದೇನೆ.

7. ನನ್ನ ಸಕಲ ಅನಿಷ್ಟಗಳನ್ನು ಅಂತಗೊಳಿಸುವುದರಿಂದ 'ಅಂತ' ಎಂದು ಕರೆಸಿಕೊಂಡ 'ಅಂ' ಎಂಬ ವರ್ಣವಾಚ್ಯನಾದ, ನನ್ನ ಶರೀರದ ಒಳಗಿರುವ, 36,000 ಬಲ ಭಾಗದ ನಾಡಿಗಳಲ್ಲಿ ನಿಂತಿರುವ, ಪುರುಷ ದೇವತೆಗಳನ್ನು ನಿಯಾಮನೆಮಾಡುವ, 36,000 ಸ್ವರಾಕ್ಷರಗಳ ನಿಯಾಮಕವಾದ, 36,000 ಪುರುಷರೂಪಗಳಿಂದ, ನಾಡಿಗಳ ಮೂಲಕ ಸಕಲೇಂದ್ರಿಯಗಳನ್ನು ನಿಯಾಮನ ಮಾಡುವ, 'ಅಂತ' ಎಂಬ ನಿನ್ನ ರೂಪಕ್ಕೆ ನಮೋ ನಮಃ. ಆ ರೂಪದಿಂದ ಅಭಿನ್ನನಾದ, ಬಿಂಬ ಮೂರ್ತಯೇ ನಮೋ ನಮಃ.

8. ಈ ವಲಯದ 'ಘೃಣಿ' ಶಬ್ದದ ಕೆಳಗೆ ಅಲಂಕಾರವಾಗಿ ಒಪ್ಪುವ 'ಅಃ' ಎಂಬ ಸ್ವರಾಕ್ಷರ ಪ್ರತಿಪಾದ್ಯನಾದ, ಸಕಲ ಇಷ್ಟಪ್ರದನಾದ, ಅರ್ಧಗರ್ಭನಾಮಕ ಬಿಂಬಮೂರ್ತಯೇ ನಮೋ ನಮಃ. ನನ್ನ ಶರೀರದ ಎಡಭಾಗದ 36,000 ನಾಡಿಗಳಲ್ಲಿ ಇರುವ, 36,000 ಸ್ತ್ರೀದೇವತೆಗಳ ನಿಯಾಮಕನಾದ, ಬೃಹತೀಸಹಸ್ರ ಋಕ್ಕಿನ 36,000 ವ್ಯಂಜನಾಕ್ಷರ ಪ್ರತಿಪಾದ್ಯನಾದ, 36,000 ಸ್ತ್ರೀರೂಪಗಳಿಂದ ಶೋಭಿಸುವ, ಆ ರೂಪಗಳಿಂದ ಅಭಿನ್ನನಾದ, ಅರ್ಧಗರ್ಭನಾಮಕ ಬಿಂಬಮೂರ್ತಯೇ ನಮೋ ನಮಃ.

9. ಹೇ ಸ್ವಾಮೀ! ನಿನ್ನನ್ನು ಸದಾ ಚಿಂತಿಸುವ ಸೌಭಾಗ್ಯ ಒಂದೇ ದಯಪಾಲಿಸು. ಇನ್ನೇನನ್ನೂ ಬೇಡುವ ಬುದ್ಧಿ ಕೊಡಬೇಡ ಹರಿಯೇ.

10. ನನ್ನ ಹೃದಯ ಕಮಲದಲ್ಲಿ ಕರ್ಣಿಕೆಯ ಮಧ್ಯ ಘೃಣಿ ಎಂಬ ನಿನ್ನ ಚಿಂತನೆ ಕೊಟ್ಟು, ಅದರ ಮೂಲಕ ನನ್ನ ಶಂಕೆಗಳೆಲ್ಲವೂ ಕಳೆದು, ನಿಶ್ಚಯ ಜ್ಞಾನ ಕೊಡು ಹರಿಯೇ.


11. ಅಂ ಅಃ ಎಂಬ ಈ ಎರಡು ವರ್ಣಗಳ ನಿನ್ನ ರೂಪದ ಚಿಂತನೆ ಕೊಟ್ಟು ಅದರ ಮೂಲಕ ನಿನ್ನಂಥಾ ಪ್ರಭುವಿನ ದಾಸದಾಸ ನಾನೆಂಬ (ಸಾತ್ವಿಕ ಗರ್ವ) ಬಿಂಕ ದಯಪಾಲಿಸು ಹರಿಯೇ.

12. ಸಕಲ ಸ್ತೋತ್ತಮ ಬಿಂಬರಿಂದ ಅಭಿನ್ನನಾದ, ಅನಂತ ತೀರ್ಥಕ್ಷೇತ್ರಗಳಲ್ಲಿರುವ, ಅನಂತ ರೂಪಗಳಿಂದ ಕೂಡಿದ, ನಿನ್ನ ಸನ್ನಿಧಾನದಲ್ಲಿ ನಿನ್ನ ಪ್ರೇರಣೆಯಿಂದ ನನ್ನಿಂದಾಗುವ ಸಕಲ ಕರ್ಮಗಳೂ ಅನಂತ ಫಲವನ್ನು ಕೊಟ್ಟೇಕೊಡುತ್ತವೆ ಎಂಬ, ನಿಶ್ಚಯ ಜ್ಞಾನ ದಯಪಾಲಿಸು ಹರಿಯೇ.

---

## ಕಂಕಣಾಕಾರದ ಮೇಲೆ ಇರುವ,
## ತ್ರಿಕೋಣಾಕೃತಿಯಲ್ಲಿರುವ, ಭಗವದ್ರೂಪಕ್ಕೆ ನಮೋ ನಮಃ.

---




**ಕಂಕಣಾಕಾರವನ್ನು ಒಳಗೆ ಮಾಡಿಕೊಂಡು ।**
**ಮಂಕುಮತಿಯ ತೊರೆದು ತ್ರಿಕೋಣಸುತ್ತಿಸಿ ।**
**ಶ್ರೀಂಕಾರ ಇಚ್ಛಾಶಕ್ತಿ ಕ್ಲೀಂಕಾರ ಕ್ರಿಯಾಶಕ್ತಿ ।**
**ಹ್ರೀಂಕಾರ ಜ್ಞಾನಶಕ್ತಿ ಮೂರು ಮೂಲೆಗೆ ಬರೆಯೊ ।**
**ಪಂಕಜ ಪಾಣಿಯು ಶ್ರೀ – ಭೂ – ದುರ್ಗಾನಾಮಕಳು ।**
**ಪಂಕಜಾಕ್ಷನ ರೂಪ ಮೂರು ಉಂಟು ।**

**1. ಅಂಗದೇಹದ ಸ್ಥಾನದಲ್ಲಿರುವ, ತ್ರಿಕೋಣ ಮಂಡಲದ ಊರ್ಧ್ವಕೋಣದಲ್ಲಿ (ಮೇಲೆ) ವಿರಾಜಿಸುವ, ಸತ್ವಗುಣ ನಿಯಾಮಕನಾದ, ಇಚ್ಛಾಶಕ್ತಿ ಪ್ರೇರಕನಾದ, ಮೊದಲನೆಯ ವ್ಯಾಹೃತಿಯಿಂದ ಪ್ರತಿಪಾದ್ಯನಾದ, ಶ್ರೀಂ ಕಾರ ನಿಯಾಮಕನಾದ, ಶ್ರೀ ರೂಪಿಣಿ ಆಗಿರುವ, ಲಕ್ಷ್ಮೀಪತಿಯಾದ, ಕ್ಷೀರಸಾಗರವಾಸಿಯಾದ, ಅನಿರುದ್ಧಾಭಿನ್ನ, ವಿಷ್ಣು ರೂಪಾಭಿನ್ನ,**

ವಿಶ್ವನಾಮಕ ಜಾಗ್ರದವಸ್ಥಾಪ್ರೇರಕ, ನನ್ನ ಬಿಂಬಮೂರ್ತಿಯೇ ನಿನಗೆ ನಮೋ ನಮಃ.

– ಹೇ ಸ್ವಾಮೀ! ನೀನೇ ನನ್ನಲ್ಲೂ , ಸಕಲ ಪ್ರಾಣಿಗಳಲ್ಲೂ, ಸತ್ವಗುಣ ನಿಯಾಮಕನಾಗಿದ್ದೀಯಾ. ಜಾಗ್ರದವಸ್ಥೆಯನ್ನು ದಯಪಾಲಿಸುತ್ತೀಯಾ. ಸಕಲೇಂದ್ರಿಯಾಭಿಮಾನಿಗಳಿಂದ ಜಾಗ್ರದವಸ್ಥೆಯ ಕಾರ್ಯಗಳನ್ನು ಮಾಡಿಸುತ್ತೀಯಾ. ನೀನು ದಯಮಾಡಿ ನಿನ್ನ ಪೂಜಾರೂಪವಾಗಿ ಎಲ್ಲಾ ಇಂದ್ರಿಯಗಳ ಕಾರ್ಯವನ್ನು ಅರ್ಪಿಸುವ ಬುದ್ಧಿಯನ್ನು ದಯಪಾಲಿಸು ಹರಿಯೇ.

**2. ತ್ರಿಕೋಣ ಮಂಡಲದ ಬಲಕೋಣದಲ್ಲಿ** ವಿರಾಜಮಾನನಾದ, 'ಕ್ಲೀಂ' ಎಂಬ ಬೀಜಾಕ್ಷರ ಪ್ರತಿಪಾದ್ಯನಾದ, ರಜೋಗುಣ ನಿಯಾಮಕನಾದ, ಎರಡನೆಯ ವ್ಯಾಹೃತಿಯಿಂದ ಪ್ರತಿಪಾದ್ಯನಾದ, ಭೂದೇವಿಯ ಅಂತರ್ಗತನಾದ, ಅನಂತಾಸನ ನಿಯಾಮಕನಾದ, ಬ್ರಹ್ಮಶಬ್ದವಾಚ್ಯನಾಗಿ ಬ್ರಹ್ಮದೇವರ ಒಳಗಿರುವ, ಪ್ರದ್ಯುಮ್ನಾಭಿನ್ನನಾದ, ಸ್ವಪ್ನಾವಸ್ಥೆಯ ನಿಯಾಮಕನಾದ, ನನ್ನ ಕಂಠದಲ್ಲಿರುವ, ತೈಜಸರೂಪಿ ಹರಯೇ ನಮೋ ನಮಃ. ಆ ತೈಜಸ ರೂಪದಿಂದ ಅಭಿನ್ನನಾದ, ಬಿಂಬ ಮೂರ್ತಯೇ ನಮೋ ನಮಃ.


– ಹೇ ಸ್ವಾಮಿ! ಈ ಜನ್ಮದಲ್ಲಿ ಅನುಭವಿಸಲೇ ಬೇಕಾದ ಅನೇಕ ದುಃಖಗಳನ್ನು ಸ್ವಪ್ನದಲ್ಲಿಯೇ ತೋರಿಸಿ, ಅನುಭವ ಕೊಟ್ಟು ಕಳೆಯುವ ನಿನ್ನ ಕರುಣಾಳುತನದ ನೆನಪು ಸದಾ ಕೊಡು . ಸ್ವಪ್ನಕಾಲದಲ್ಲಿ ಏನೇನು ತಿರುಗಾಡಿದ್ದು, ತಿಂದದ್ದು ಮೊದಲಾದುವೆಲ್ಲಾ ನಿನ್ನ ಪೂಜೆಯಾಗಿ ತತ್ವಾಭಿಮಾನಿಗಳ ಮೂಲಕ ವಿನಯದಿಂದ ಅರ್ಪಿಸುವ ಸೌಭಾಗ್ಯ ಕೊಡು ಹರಿಯೇ. ಹೇಗೆ ಸ್ವಪ್ನದಲ್ಲಿ ನೀನು ತೋರಿದ ಸಕಲ ಪ್ರಪಂಚವು ಸ್ವಪ್ನಮುಗಿದ ಕೂಡಲೇ ನನಗೆ ಅಂಟಿಲ್ಲದೇ ಮಾಡುತ್ತೀಯೋ ಹಾಗೆಯೇ ಈ ಸಂಸಾರದ ನೋವು, ಬೇವುಗಳ ಅಂಟನ್ನು ನಿನ್ನ ನೆನಪಿನಿಂದ ಕಳೆದುಬಿಡು ಹರಿಯೇ.

**3. ತ್ರಿಕೋಣ ಮಂಡಲದ ಎಡಭಾಗದ ಕೋಣದಲ್ಲಿ** 'ಹ್ರೀಂ' ಎಂಬ ಬೀಜಾಕ್ಷರ ಪ್ರತಿಪಾದ್ಯನಾದ, (ಕರೆಯಲ್ಪಡುವ) , ತಮೋಗುಣ ಪೇರಕನಾದ, ಜ್ಞಾನಶಕ್ತಿ ಪೇರಕನಾದ, ವೈಕುಂಠಪತಿಯಾದ, ರುದ್ರಾಂತರ್ಗತ ರುದ್ರನಾಮಕನಾದ, ಮೂರನೆಯ ವ್ಯಾಹೃತಿಯಿಂದ ಪ್ರತಿಪಾದ್ಯನಾದ, ದುರ್ಗಾಪತಿ ಸಂಕರ್ಷಣಾತ್ಮಕ, ಸುಷುಪ್ತಿಪ್ರದನಾದ,

**ಪ್ರಾಜ್ಞರೂಪಿಯೇ ನಮೋ ನಮಃ. ಪ್ರಾಜ್ಞನಿಂದ ಅಭಿನ್ನನಾದ, ನನ್ನ ಬಿಂಬಮೂರ್ತಿಗೆ ನಮೋ ನಮಃ.**

**– ಹೇ ಸ್ವಾಮಿ! ಸುಷುಪ್ತಿಯನ್ನು ಕೊಟ್ಟು, ಎಚ್ಚರಕಾಲದ ಹಾಗೂ ಸ್ವಪ್ನಕಾಲದ ಶ್ರಮವನ್ನು ಕಳೆದು, ಸುಖಪ್ರದನಾಗಿದ್ದೀಯಾ, ನಿನ್ನ ಉಪಕಾರ ಮರೆಯಲಾರೆ ಹರಿಯೇ. ಸುಷುಪ್ತಿಯಲ್ಲಿ ನೀ ದಯಪಾಲಿಸಿದ ಸುಖ ಅನುಭವಿಸಿದ್ದು ನಿನ್ನ ಪೂಜೆಯಾಗಲಿ ಹರಿಯೇ. ಹೇ ನಾರಸಿಂಹ ನಿನ್ನ ನೆನಪು ಸದಾ ಕೊಡು. ಇದೊಂದೇ ಸಾಕು.**

-------------------
# ತ್ರಿಕೋಣದ ಹೊರಗಡೆ
-------------------




**ಕಂಕಣಾಕಾರ ಮರಳೆ ತ್ರಿಕೋಣ ಮೇಲೆ ಬರೆದು ।**
**ಸಂಕೋಚವಾಗಿ ಇದೆ ದ್ವಿತೀಯ ವಲಯ ।**
**ಪಂಕಜ ಮಿತ್ರ ಸೋಮ ಅಗ್ನಿ ಜನರ ನಾಗ**
**ಕಂಕಣ ಅನಲ ವರುಣ ದಿಕ್ಕಿಗೆ ರಚಿಸಿ ।**
**ಕಿಂಕರ ಜನಪಾಲ ವಿಜಯ ವಿಠ್ಠಲ ಅಕ ।**
**ಆಂಕನ ಭಜಿಸುವುದು ಹೃದಯದಲಿ ತಿಳಿದು ॥1॥**

**ಮಟ್ಟ ತಾಳ**

**ಕರಿ ಅಜ ರಥ ವೀಥಿ ಎಂದೆಂಬುವೆ ಮೂರು ।**
**ಬರೆದು ಇದಕೆ ಹನ್ನೆರಡು ರಾಶಿಗಳು ವಿ– ।**
**ಸ್ತರವಾಗಿ ಉಂಟು ಎರಡೆರಡು ವೊಂದು ಕಡೆ ।**
**ಅರಿವದು ಸ್ಥಿಮಿತ ಸಮಗತಿ ತ್ವರಗತಿ ಸೂರ್ಯನ್ನ ।**

**1. ತ್ರಿಕೋಣದ ಹೊರಗಡೆ ಐಶಾನ್ಯದಿಕ್ಕಿನಲ್ಲಿ** ವಿರಾಜಮಾನನಾದ, ಸೂರ್ಯಮಂಡಲ ಮಧ್ಯವರ್ತಿಯಾದ, 'ಲಂ' ಎಂಬ ಬೀಜಾಕ್ಷರ ಪ್ರತಿಪಾದ್ಯನಾದ, ಶ್ರೀನಾರಾಯಣಾಭಿನ್ನ, ಬಿಂಬ ಮೂರ್ತಯೇ ನಮೋ ನಮಃ. ಹೇ ಸೂರ್ಯದೇವರೇ! ಭಗವಂತನ ಪೀಠದಲ್ಲಿದ್ದುಕೊಂಡು ಸೇವೆಮಾಡುವ ತಾವು ನನಗೆ ಭಗವಂತನಲ್ಲಿ ಸ್ಥಿರ ಬುದ್ಧಿ ಬರುವಂತೆ. ನಿಮ್ಮ ಕಿರಣಗಳಿಂದ ನನ್ನ ಅಜ್ಞಾನ ಕಳೆದು ದಯಪಾಲಿಸಿರಿ.

**2. ತ್ರಿಕೋಣದ ಹೊರಗಡೆ ಆಜ್ಞೇಯ ದಿಕ್ಕಿನಲ್ಲಿ** ವಿರಾಜಿಸುವ 'ರಂ' ಎಂಬ ಬೀಜಾಕ್ಷರ ಪ್ರತಿಪಾದ್ಯನಾದ, ಶ್ರೀ ಕೃಷ್ಣಾಭಿನ್ನ, ಚಂದ್ರಮಂಡಲದಲ್ಲಿರುವ, ಬಿಂಬ ಮೂರ್ತಿಗೆ ನಮೋ ನಮಃ. ಹೇ ಚಂದ್ರದೇವರೇ! ಶ್ರೀ ಹರಿಯ ಪೀಠರೂಪದಲ್ಲಿ ಸ್ಥಿರವಾಗಿ ನಿಂತು ಸೇವೆಸಲ್ಲಿಸುತ್ತಿರುವ, ತಾವು, ನಿಮ್ಮ ತಂಪಾದ ಕೃಪಾಕಿರಣಗಳಿಂದ ಮನೋದೋಷಗಳನ್ನು ಹೋಗಲಾಡಿಸಿ ನಿಶ್ಚಯಜ್ಞಾನ ದಯಪಾಲಿಸಿರಿ.

**3. ತ್ರಿಕೋಣದ ಹೊರಗೆ ಪಶ್ಚಿಮ ದಿಕ್ಕಿನಲ್ಲಿ** ವಿರಾಜಿಸುವ ಅಗ್ನಿಮಂಡಲ ಮಧ್ಯವರ್ತಿಯಾದ, 'ಯಂ' ಎಂಬ ಬೀಜಾಕ್ಷರ ಪ್ರತಿಪಾದ್ಯನಾದ, ಶ್ರೀ ನಾರಸಿಂಹಾತ್ಮಕನಾದ, ಬಿಂಬ ಮೂರ್ತಿಗೆ ನಮೋ ನಮಃ. ಹೇ ಅಗ್ನಿದೇವರೇ! ಶ್ರೀ ಹರಿಯ ಪೀಠರೂಪದಲ್ಲಿ ಸ್ಥಿರವಾಗಿ ನಿಂತು ಸೇವೆಸಲ್ಲಿಸುವ ಸೌಭಾಗ್ಯವಂತರು ನೀವು. ನನ್ನ ಸಾಧನ ಪ್ರತಿಬಂಧಕವಾದ, ಆಲಸ್ಯ, ನಿದ್ರೆ, ಹಸಿವು, ತೃಷೆ ಮೊದಲಾದವು ಸಾಧನೆಗೆ ವಿಘ್ನಮಾಡದಂತೆ ಅವುಗಳನ್ನು ದಹಿಸಿ. ಕೃಪಾದೃಷ್ಟಿಯಿಂದ ಸಣ್ಣವನೆಂದು ಮನ್ನಿಸಿರಿ.

**4. ತ್ರಿಕೋಣದ ಮೇಲೆ ಆಗ್ನೇಯ ದಿಕ್ಕಿನಲ್ಲಿ** ವಿರಾಜಮಾನವಾದ, 'ಮೇಷ, ವೃಷಭ, ಮಿಥುನ, ಕಟಕ 'ರಾಶಿಗಳಿಂದ ಕೂಡಿದ, ಆಯಾ ರಾಶಿಗಳ ನಿಯಾಮಕನಾದ, ಕರಿ ವೀಥಿಯಲ್ಲಿ 'ಕರಿವೀಥೀ' ಎಂಬ ಹೆಸರಿನಿಂದ, ಆ ಆಕಾರದಿಂದ ವಿರಾಜಿಸುವ, ಸೂರ್ಯನ ರಥದ ಸ್ಥಿರಗತಿಗೆ ಕಾರಣನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**5. ತ್ರಿಕೋಣದ ಪಶ್ಚಿಮ ದಿಕ್ಕಿನಲ್ಲಿರುವ**, 'ಸಿಂಹ ಕನ್ಯಾ ತುಲಾ ವೃಶ್ಚಿಕ' ಎಂಬ ರಾಶಿಗಳಿಂದ ಕೂಡಿದ ಆಯಾ ರಾಶಿಗಳ ಹೆಸರಿನಿಂದ ನಿಯಾಮಕನಾದ, 'ರಥ ವೀಥೀ' ಎಂಬ ಹೆಸರಿನಿಂದ ರಥವೀಥಿಯಲ್ಲಿ, ಆ ಆಕಾರದಿಂದ ವಿರಾಜಮಾನನಾದ, ಸೂರ್ಯನ ರಥದ ಸಮಗತಿಗೆ ಕಾರಣನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**6. ತ್ರಿಕೋಣದ ಐಶಾನ್ಯ ದಿಕ್ಕಿನಲ್ಲಿ** 'ಧನಸ್ಸು, ಮಕರ, ಕುಂಭ, ಮೀನ' ರಾಶಿಗಳಿಂದ ಕೂಡಿದ ಆ ರಾಶಿಗಳ ಹೆಸರಿಂದಲೇ ಅವುಗಳ ನಿಯಾಮಕನಾದ, 'ಅಜವೀಥೀ' ಎಂಬ ಹೆಸರಿನಿಂದ, ಅಜವೀಥೀಯ ಆಕಾರದಲ್ಲಿದ್ದು, ಅದಕ್ಕೆ ನಿಯಾಮಕನಾದ, ಸೂರ್ಯನ ತ್ವರಗತಿಗೆ ಕಾರಣನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

– ಹೇ ಸ್ವಾಮೀ! ನನ್ನ ಹೃದಯದಲ್ಲಿರುವ, ಸೂರ್ಯಂತರ್ಗತನಾದ, ಘೃಣಿ ನಾಮಕ ಮೂಲೇಶ, ನೀನು ರಥದಲ್ಲಿ ಕುಳಿತು ಈ ವೀಥಿಗಳಲ್ಲಿ ರಾಶಿಗಳ ಮೂಲಕ ತಿರುಗುವಾಗ, ಆ ರಾಶಿ ಅಭಿಮಾನಿಗಳು, ವೀಥಿಯಾಭಿಮಾನಿಗಳು ನಿನ್ನ ಪ್ರೇರಣೆಯಿಂದ, ನನ್ನ ಜೀವನದಲ್ಲಿ ಉಂಟು ಮಾಡಿದ, ನನ್ನ ಕರ್ಮಾನುಸಾರವಾದ, ಏರುಪೇರುಗಳನ್ನು ಕೊಟ್ಟು, ಅದೆಲ್ಲವೂ ನಿನ್ನ ಪೂಜೆಯೆಂದು ಆಯಾ ದಿಕ್ಕಿಗೆ ನೀನು ಬಂದಾಗ ಅರ್ಪಣೆ ಮಾಡುತ್ತಾರೆ. ನನ್ನ ಜೀವನದಲ್ಲಿ ನೀನು ಕೊಟ್ಟ ಏರುಪೇರುಗಳೆಲ್ಲವೂ ನಿನ್ನ ಪೂಜೆಯಾಗಲಿ ಹರಿಯೇ. ನಿನ್ನ ನೆನೆಪು ಸ್ಥಿರವಾಗಲಿ ಹರಿಯೇ. ನಿನ್ನ ನೆನಪಿನಿಂದ ಆಧ್ಯಾತ್ಮಿಕ ಸಾಧನೆಯಲ್ಲಿ ಉನ್ನತಿಕೊಡು ಹರಿಯೇ.

------------------------------------------

## ತ್ರಿಕೋಣ ಮಂಡಲದ ಮೇಲಿರುವ ಎರಡನೆಯ ವಲಯ

------------------------------------------


7. ಕರಿ ಅಜ ರಥ ವೀಥಿಯ ಆಕಾರದಲ್ಲಿ ಭಗವಂತನಿರುತ್ತಾನೆಂದು ಚಿಂತಿಸಿದರೆ ಸರ್ವತ್ರ ಭಗವಂತನನ್ನು ಹುಡುಕುವ ಬುದ್ಧಿ ಬರುತ್ತದೆ.

**8. ತ್ರಿಕೋಣದ ಹೊರಭಾಗದಲ್ಲಿರುವ**, ಸೂರ್ಯ, ಚಂದ್ರ, ಅಗ್ನಿ, ಮಂಡಲಗಳಲ್ಲಿ ಆಯಾ ದೇವತೆಗಳು ಭಗವಂತನ ಪೀಠರೂಪದಲ್ಲಿ ನಿಂತು ಸೇವೆಮಾಡುತ್ತಿರುತ್ತಾರೆ. ಅವರನ್ನು ಪ್ರಾರ್ಥಿಸಿದರೆ ಭಗವಂತನಿಗೆ ಭದ್ರ ಪೀಠರೂಪವಾದ, ಸ್ಥಿರಬುದ್ಧಿಯನ್ನು ನಮಗೆ ದಯಪಾಲಿಸುತ್ತಾರೆ.

----------------

# ಷಟ್ಕೋಣ ಮಂಡಲ

----------------




**ಎರಡು ನಾಲಕು ಕೋಣೆ ವಿರಚಿಸಿ ಅದರ ಮೇಲೆ ।**
**ಮರಳೆ ಮಧು – ಮಾಧವಾ ಕರೆಸುವ ಋತು ಒಂದು ।**
**ಬರೆದು ಪ್ರಣವ ವಿವರ ಹೃದಯದಲ್ಲಿ ನಮ ।**
**ಸ್ಕರಿಸು ಜ್ಞಾನಾತ್ಮನೆಂದು ಧರಿಸು ಈ ಪರಿ ।**
**ಮೂರು ಎರಡು ಕೋಣೆಯ ಮಧ್ಯ ।**
**ತರುವಾಯ ಮಾಸ – ಋತು ವರುಷ ತಾರಕ ಸಂ ।**
**ಸ್ಮರಿಸಿ ಕ್ರಮ ವರ್ಣ ಹರಿ ಐಶ್ವರ್ಯಾದಿ ।**
**ಪರಮ ಮೂರ್ತಿಗಳನ್ನು ಶಿರಸು ಮೊದಲು ಮಾಡಿ ।**
**ಕರತಳ ಪದತನಕ ಚರಿತೆಯಾಕೊಂಡಾಡು ।**

**ಮೊದಲನೆಯ ಕೋಣ**

ಷಟ್ಕೊಣ ಮಂಡಲದ ಪ್ರಥಮ ಕೋಣದ ಒಳಗೆ ವಿರಾಜಮಾನನಾದ, ಪ್ರಭವ, ವಿಭವ, ಶುಕ್ಲ, ಪ್ರಮೋದ, ಪ್ರಜಾಪತಿ, ಆಂಗಿರ, ಶ್ರೀಮುಖ, ಭಾವ, ಯುವ, ಧಾತೃ, ಎಂಬ ಹತ್ತು ಸಂವತ್ಸರಗಳಿಗೆ ನಿಯಾಮಕನಾದ, ಆಯಾ ಸಂವತ್ಸರದ ಹೆಸರಿಂದಲೇನೆ ಇರುವಂಥಾ, ಭಗವದ್ರೂಪಗಳಿಗೆ ನಮೋ ನಮಃ.

ಹಾಗೆಯೇ ವಸಂತ ಋತು ನಿಯಾಮಕನಾದ, ವೇದವ್ಯಾಸರೂಪಿಗೆ ನಮಃ.
ಚೈತ್ರ ಮಾಸ ನಿಯಾಮಕ, ವಿಷ್ಣವೇ ನಮಃ.
ವೈಶಾಖಮಾಸ ನಿಯಾಮಕ, ಮಧುಸೂದನಾಯ ನಮಃ.

ಈ ತನ್ನ ರೂಪಗಳಿಂದ ಅಭಿನ್ನನಾದ, ಕಾಲ ನಿಯಾಮಕನಾದ, ಪೂರ್ಣ ಜ್ಞಾನಾತ್ಮನಾಗಿರುವಂಥ ವಿಷ್ಣು ಷಡಕ್ಷರ ಮಂತ್ರದಲ್ಲಿರುವ, ಪ್ರಥಮವರ್ಣಪ್ರತಿಪಾದ್ಯನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**ಎರಡನೆಯ ಕೋಣ**

ಷಟ್ಕೋಣ ಮಂಡಲದ ಎರಡನೇ ಕೋಣದಲ್ಲಿ ವಿರಾಜಮಾನನಾದ, ಈಶ್ವರ, ಬಹುಧಾನ್ಯ, ಪ್ರಮಾಥಿ, ವಿಕ್ರಮ, ವೃಷ, ಚಿತ್ರಭಾನು, ಸ್ವಭಾನು, ತಾರಣ, ಪಾರ್ಥಿವ, ವ್ಯಯ ಎಂಬ ಹತ್ತು ವರ್ಷಗಳಿಗೆ, ಆಯಾ ಹೆಸರಿಂದಲೇನೆ ನಿಯಾಮಕನಾದ, ಭಗವದ್ರೂಪಗಳಿಗೆ ನಮೋ ನಮಃ.

ಗ್ರೀಷ್ಮ ಋತು ನಿಯಾಮಕನಾದ, ಅನಿರುದ್ಧ ರೂಪಕ್ಕೆ ನಮೋ ನಮಃ.
ಜೇಷ್ಠಮಾಸ ನಿಯಾಮಕ, ತ್ರಿವಿಕ್ರಮನಿಗೆ ನಮೋ ನಮಃ.
ಆಷಾಢ ಮಾಸ ನಿಯಾಮಕ, ವಾಮನನಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ವಿಷ್ಣು ಷಡಕ್ಷರ ಮಂತ್ರದ ಎರಡನೇ ವರ್ಣದಿಂದ ಪ್ರತಿಪಾದ್ಯನಾದ, ಪೂರ್ಣೈಶ್ವರ್ಯಾತ್ಮಕನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**ಮೂರನೆಯ ಕೋಣ**

ಷಟ್ಕೋಣದ ಮೂರನೇ ಕೋಣದಲ್ಲಿ ವಿರಾಜಮಾನನಾದ ಸರ್ವಜಿತ್, ಸರ್ವಧಾರಿ, ವಿರೋಧಿ, ವಿಕೃತಿ, ಖರ, ನಂದನ, ವಿಜಯ, ಜಯ, ಮನ್ಮಥ,

ದುರ್ಮುಖಿ ಎಂಬ ಹತ್ತು ಸಂವತ್ಸರಗಳಿಗೆ ನಿಯಾಮಕನಾದ, ಆಯಾ ಹೆಸರಿಂದಲೇನೆ ವಿರಾಜಿಸುವ ಭಗವದ್ರೂಪಗಳಿಗೆ ನಮೋ ನಮಃ.

ವರ್ಷಾ ಋತು ನಿಯಾಮಕ, ಪ್ರದ್ಯುಮ್ನಾಯ ನಮೋ ನಮಃ.
ಶ್ರಾವಣ ಮಾಸ ನಿಯಾಮಕನಾದ, ಶ್ರೀಧರಾಯ ನಮೋ ನಮಃ.
ಭಾದ್ರಪದ ಮಾಸ ನಿಯಾಮಕನಾದ, ಹೃಷೀಕೇಶಾಯ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ವಿಷ್ಣು ಷಡಕ್ಷರ ಮಂತ್ರದ ಮೂರನೆಯ ವರ್ಣದಿಂದ ಪ್ರತಿಪಾದ್ಯನಾದ, ಪೂರ್ಣಪ್ರಭಾತ್ಮನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

## ನಾಲ್ಕನೆಯ ಕೋಣ

ಷಟ್ಕೋಣ ಮಂಡಲದ ನಾಲ್ಕನೆಯ ಕೋಣದಲ್ಲಿ ವಿರಾಜಮಾನನಾದ, ಹೇವಿಳಂಬಿ, ವಿಳಂಬಿ, ವಿಕಾರಿ, ಶಾರ್ವರಿ, ಪ್ಲವ, ಶುಭಕೃತ್, ಶೋಭಕೃತ್, ಕ್ರೋಧಿ, ವಿಶ್ವಾವಸು, ಪರಾಭವ ಎಂಬ ಹತ್ತು ವರ್ಷಗಳಿಗೆ ಆಯಾ ಹೆಸರಿಂದಲೇವೆ ನಿಯಾಮಕನಾದ, ಭಗವದ್ರೂಪಗಳಿಗೆ ನಮೋ ನಮಃ.

ಶರದೃತು ನಿಯಾಮಕ, ಸಂಕರ್ಷಣಾಯ ನಮಃ.
ಆಶ್ವಯುಜ ಮಾಸ ನಿಯಾಮಕ, ಪದ್ಮನಾಭಾಯ ನಮಃ.
ಕಾರ್ತಿಕ ಮಾಸ ನಿಯಾಮಕನಾದ, ದಾಮೋದರಾಯ ನಮಃ.

ಈ ರೂಪಗಳಿಂದ ಅಭಿನ್ನನಾದ, ವಿಷ್ಣು ಷಡಕ್ಷರ ಮಂತ್ರದ ನಾಲ್ಕನೆಯ ವರ್ಣದಿಂದ ಪ್ರತಿಪಾದ್ಯನಾದ, ಪೂರ್ಣಾನಂದಾತ್ಮಕನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

## ಐದನೆಯ ಕೋಣ

ಷಟ್ಕೋಣ ಮಂಡಲದ ಐದನೆಯ ಕೊಣದಲ್ಲಿ ವಿರಾಜಮಾನನಾಗಿರುವ, ಪ್ಲವಂಗ, ಕೀಲಕ, ಸೌಮ್ಯ, ಸಾಧಾರಣ, ವಿರೋಧಿಕೃತ್, ಪರಿಧಾವಿ, ಪ್ರಮಾಥಿ, ಆನಂದ, ರಾಕ್ಷಸ, ನಳ, ಎಂಬ ಹತ್ತು ವರ್ಷಗಳಿಗೆ ಆಯಾ ಹೆಸರುಗಳಿಂದಲೇನೆ ನಿಯಾಮಕನಾದ, ಭಗವದ್ರೂಪಗಳಿಗೆ ನಮೋ ನಮಃ.
ಹೇಮಂತಋತು ನಿಯಾಮಕ, ವಾಸುದೇವಾಯ ನಮಃ.
ಮಾರ್ಗಶಿರಮಾಸ ನಿಯಾಮಕ, ಕೇಶವಾಯ ನಮಃ.
ಪುಷ್ಯಮಾಸ ನಿಯಾಮಕ, ನಾರಾಯಣಾಯ ನಮಃ.

ಈ ರೂಪಗಳಿಂದ ಅಭಿನ್ನನಾದ, ವಿಷ್ಣು ಷಡಕ್ಷರ ಮಂತ್ರದ ಐದನೆಯ ವರ್ಣದಿಂದ ಪ್ರತಿಪಾದ್ಯನಾದ, ಪೂರ್ಣತೇಜಾತ್ಮಕನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**ಆರನೆಯ ಕೋಣ**

ಷಟ್ಕೋಣ ಮಂಡಲದ ಆರನೆಯ ಕೋಣದಲ್ಲಿ ವಿರಾಜಮಾನನಾಗಿರುವ, ಪಿಂಗಲ, ಕಾಲಯುಕ್ತ, ಸಿದ್ಧಾರ್ಥಿ, ರೌದ್ರ, ದುರ್ಮತಿ, ದುಂದುಭಿ, ರುಧಿರೋದ್ಗಾರಿ, ರಕ್ತಾಕ್ಷಿ, ಕ್ರೋಧನ, ಕ್ಷಯ ಎಂಬ ಹತ್ತು ಸಂವತ್ಸರಗಳಿಗೆ ಆಯಾ ಹೆಸರುಗಳಿಂದಲೇನೇ ನಿಯಾಮಕನಾದ, ಭಗವದ್ರೂಪಗಳಿಗೆ ನಮೋ ನಮಃ.

ಶಿಶಿರ ಋತು ನಿಯಾಮಕ, ನಾರಾಯಣಾಯ ನಮಃ.
ಮಾಘ ಮಾಸ ನಿಯಾಮಕ, ಮಾಧವಾಯ ನಮಃ.
ಫಾಲ್ಗುಣ ಮಾಸ ನಿಯಾಮಕ, ಗೋವಿಂದಾಯ ನಮಃ.


ಈ ರೂಪಗಳಿಂದ ಅಭಿನ್ನನಾದ, ವಿಷ್ಣು ಷಡಕ್ಷರ ಮಂತ್ರದ ಆರನೆಯ ವರ್ಣದಿಂದ ಪ್ರತಿಪಾದ್ಯನಾದ, ಪೂರ್ಣಶಕ್ತ್ಯಾತ್ಮಕನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**ಪ್ರಾರ್ಥನೆ –:**

ಹೇ ಸ್ವಾಮಿ! ನನ್ನ ಜೀವನದಲ್ಲಿ ಬರುವ ಕಾಲನಿಯಾಮಕನಾದ, ಈ ನಿನ್ನ ರೂಪಗಳಿಗೆ ಅನಂತ ನಮಸ್ಕಾರಗಳು. ಆಯಾ ವರ್ಷ, ಅಯನ, ಋತು, ಮಾಸ, ಪಕ್ಷ, ದಿನ, ಮೊದಲಾದವುಗಳಲ್ಲಿ – ನನ್ನ ಕರ್ಮಾನುಸಾರ ನನ್ನ ಒಳ್ಳೇಯದಕ್ಕಾಗಿಯೇ, ಕರುಣೆಯಿಂದ ನೀನು ಕೊಡುವ, ಸುಖ ದುಖಗಳನ್ನು ಅನುಭವಿಸುವುದು, ನಿನ್ನ ಪೂಜೆಯೆಂದು ಚಿಂತಿಸುವ ಬುದ್ಧಿಯನ್ನು ಕೊಡು. ಚಳಿ, ಬಿಸಿಲು, ಮಳೆ, ಗಾಳಿಗಳ ನಿಂದಿಸುವಂತೆ ಬುದ್ಧಿ ಕೊಡಬೇಡ ಹರಿಯೇ. ನನ್ನ ಜೀವನದಲ್ಲಿ ಹಿಂದೆ ಬಂದ, ಮುಂದೆ ಬರುವ, ಸಂವತ್ಸರ, ಅಯನ, ಋತು, ಮಾಸ, ಪಕ್ಷ, ದಿನ, ಮೊದಲಾದವುಗಳೆಲ್ಲಾ, ಬದುಕೆಂಬ ಯಜ್ಞನದಲ್ಲಿ ಸಮಿತ್ತುಗಳಾಗಿ, ಅರ್ಪಿಸುತ್ತಿದ್ದೇನೆ, ದಯಮಾಡಿ ಸ್ವೀಕರಿಸೋ ಹರಿಯೇ.

---

## ಷಟ್ಕೋಣದ ಮೇಲ್ಭಾಗ (ಕೆಳಮುಖವಾದ, ಷಟ್ಕೋಣ)




**ಗುರುತು ಆರು ಕೋಣೆ ಸರಿ ಉಪರಿಭಾಗ ।**
**ಎರಡರ ಮಧ್ಯ ವರಣಂಗಳು ಉಂಟು ।**
**ಅರಹುವೆ ಪ್ರಥಮದಲ್ಲಿ ಎರಡೆರಡು ನಾಲ್ಕು ।**
**1. – 'ಅ, ಆ, ಕ, ಖ, ಡ, ಢ, ಮ, ಯ' ।**
**2. ಎರಡೆನೆಯ ಮನಿಯಲ್ಲಿ ವರಣಗಳಿಪ್ಪವಯ್ಯ ।**
**'ಇ, ಈ, ಉ, ಊ, ಗ, ಘ, ಣ, ತ, ರ, ಲ' ।**
**3. ಸ್ಮರಿಸು ಮೂರನೆ ಮನಿಯಲ್ಲಿರುತಿಪ್ಪ ಮಾತ್ರ ।**
**'ಋ, ೠ, ಌ, ೡ, ಙ, ಚ, ಥ, ದ, ವ, ಶ' ।**
**4. ಕರಿಸಿಕೊಂಡವು ಇನಿತು ನಾಲ್ಕನೆ ಸ್ಥಾನದಲಿ ।**

‘ಎ, ಐ, ಛ, ಜ, ಧ, ನ, ಷ, ಸ’ ।
5. ವರಣಂಗಳು ಗ್ರಹಿಸು ಐದನೆ ಮನಿಯಲ್ಲಿ ।
‘ಓ, ಔ, ಝ, ಞ, ಪ, ಫ, ಹ, ಳ’ ।
6. ನಿರುತ ಇಪ್ಪದು ಕೇಳಿ ಕಡಿಯಣ ಮನಿಯಲ್ಲಿ ।
‘ಅಂ, ಅಃ, ಟ, ಠ, ಬ, ಭ, ಕ್ಷ’ ।
ಬರೆದು ಈ ಪರಿಯಲ್ಲಿ ಆರುಮನಿಯ ಮಧ್ಯ ।
ಸರಿ ಇಲ್ಲಿಗೆ ಎನ್ನಿ ತರುವಾಯ ನಾಲ್ಕು ।
ಎರಡೂ ವಲಯಾಕಾರ ಎರಡು ಕೋಣೆಯ ಗಣಿತ ।
ನಿರೀಕ್ಷಿಸಿ ಮನದಲ್ಲಿ ಪರಿಶುದ್ಧನಾಗಿ ।
ಪರಮಪುರುಷ ನಮ್ಮ ವಿಜಯವಿಠ್ಠಲ ಮೂರ್ತಿಯ ।
ಸ್ಮರಿಸು ಅಜ್ಯಾದಿಗಳ ನರಸಿಂಹ ಪರಿಯಂತ ॥2॥

1. ಷಟ್ಕೋಣ ಮಂಡಲದ ಮೊದಲನೆಯ ಹಾಗು ಎರಡನೆಯಕೋಣಗಳ ಮಧ್ಯೆ ವಿರಾಜಮಾನವಾದ, ಕೆಳಮುಖದ ಮೊದಲನೆಯ ಕೋಣದಲ್ಲಿ, ಅ, ಆ, ಕ, ಖ, ಡ, ಢ, ಮ, ಯ ಎಂಬ ಮಾತೃಕಾವರ್ಣ ನಿಯಾಮಕವಾದ, ಅಜಾಯ ನಮಃ. ಆನಂದಾಯ ನಮಃ. ಕಪಿಲಾಯ ನಮಃ. ಖಪತಯೇ ನಮಃ. ಡರಕಾಯ ನಮಃ. ಢರಿಣೇ ನಮಃ. ಮನವೇ ನಮಃ. ಯಜ್ಞಾಯ ನಮಃ. ಅರ್ಕಲಿ ಎಂದು ಕರಿಸಿಕೊಳ್ಳುವ ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

2. ಷಟ್ಕೋಣ ಮಂಡಲದ ಎರಡನೆಯ ಹಾಗು ಮೂರನೆಯ ಕೋಣಗಳ ಮಧ್ಯೆ ಇರುವ, ಕೆಳಮುಖದ ಎರಡನೆಯಕೋಣದಲ್ಲಿ ವಿರಾಜಮಾನನಾದ, ಇ,ಈ,ಉ,ಊ,ಗ,ಘ,ಣ,ತ,ರ,ಲ ಎಂಬ ಮಾತೃಕಾ ವರ್ಣ ನಿಯಾಮಕನಾದ, ಇಂದ್ರಾಯ ನಮಃ. ಈಶಾನಾಯ ನಮಃ. ಉಗ್ರಾಯ ನಮಃ. ಊರ್ಜಾಯ ನಮಃ. ಗರುಡಾಸನಾಯ ನಮಃ. ಘರ್ಮಾಯ ನಮಃ. ಣಾತ್ಮನೇ ನಮಃ. ತಾರಾಯ ನಮಃ. ರಾಮಾಯ ನಮಃ. ಲಕ್ಷ್ಮೀ ಪತಯೇ ನಮಃ. ಅರ್ಕಲಿ ಎಂದು ಕರಿಸಿಕೊಳ್ಳುವ ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ

3. ಷಟ್ಕೋಣ ಮಂಡಲದ ಮೂರನೆಯ ಹಾಗು ನಾಲ್ಕನೆಯ ಕೋಣಗಳ ಮಧ್ಯೆ ಇರುವ, ಕೆಳ ಮುಖದ ಮೂರನೆಯ ಕೋಣದಲ್ಲಿ ವಿರಾಜಮಾನವಾದ, ಋ,ೠ,ಌ,ೡ,ಙ,ಚ,ಥ,ವ,ಶ ಎಂಬ ಮಾತೃಕಾ ನಿಯಾಮಕವಾದ, ಋತುಂಭರಾಯ ನಮಃ. ೠಘಾಯನಮಃ. ಌಶಾಯ

ನಮಃ. ಲೃಜಯೇ ನಮಃ. ಜಸಾರಾಯ ನಮಃ. ಚಾರ್ವಂಗಾಯ ನಮಃ. ಥಭಾಯ ನಮಃ. ದಂಡಿನೇ ನಮಃ. ವರಾಯ ನಮಃ. ಶಾಂತ ಸಂವಿದೇ ನಮಃ. ಅರ್ಕಲಿ ಎಂದು ಕರಿಸಿಕೊಳ್ಳುವ ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**4. ಷಟ್ಕೋಣ ಮಂಡಲದ ನಾಲ್ಕನೆಯ ಹಾಗು ಐದನೆಯ ಕೋಣಗಳ ಮಧ್ಯೆ** ಇರುವ, ಕೆಳಮುಖದ ನಾಲ್ಕನೆಯ ಕೋಣದಲ್ಲಿ ವಿರಾಜಮಾನವಾದ, ಏ, ಐ, ಛ, ಜ, ಧ, ನ, ಷ, ಸ ಎಂಬ ಮಾತೃಕಾ ನಿಯಾಮಕವಾದ, ಏಕಾತ್ಮನೇ ನಮಃ. ಐರಾಯ ನಮಃ. ಛಂದೋಗಮ್ಯಾಯ ನಮಃ. ಜನಾರ್ದನಾಯ ನಮಃ. ಧನ್ವಿನೇ ನಮಃ. ನಮ್ಯಾಯ ನಮಃ. ಷಡ್ಗುಣಾತ್ಮನೇ ನಮಃ. ಸಾರಾತ್ಮನೇ ನಮಃ. ಅರ್ಕಲಿ ಎಂದು ಕರಿಸಿಕೊಳ್ಳುವ ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**5. ಷಟ್ಕೋಣ ಮಂಡಲದ ಐದನೆಯ ಹಾಗು ಆರನೆಯ ಕೋಣಗಳ ಮಧ್ಯೆ** ಇರುವ, ಕೆಳ ಮುಖದ ಐದನೆಯ ಕೋಣದಲ್ಲಿ ವಿರಾಜಮಾನವಾದ ಓ, ಔ, ಝ, ಞ, ಪ, ಫ, ಹ, ಳ ಎಂಬ ಮಾತೃಕಾ ನಿಯಾಮಕವಾದ, ಓಜೋಭೃತೇ ನಮಃ. ಔರಸಾಯ ನಮಃ. ಝಾಟಿತಾರಯೇ ನಮಃ. ಞಮಾಯ ನಮಃ. ಪರಾಯ ನಮಃ. ಫಲಿನೇ ನಮಃ. ಹಂಸಾಯ ನಮಃ. ಳಾಳುಕಾಯ ನಮಃ. ಅರ್ಕಲಿ ಎಂದು ಕರಿಸಿಕೊಳ್ಳುವ ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**6. ಷಟ್ಕೋಣ ಮಂಡಲದ ಆರನೆಯ ಹಾಗು ಮೊದಲನೆಯ ಕೋಣಗಳ ಮಧ್ಯೆ** ಇರುವ, ಕೆಳಮುಖದ ಆರನೆಯ ಕೋಣದಲ್ಲಿ ವಿರಾಜಮಾನವಾದ, ಅಂ, ಅಃ, ಟ, ಠ, ಬ, ಭ, ಕ್ಷ ಎಂಬ ಮಾತೃಕಾ ನಿಯಾಮಕವಾದ, ಅಂತಾಯ ನಮಃ. ಅರ್ಧಗರ್ಭಾಯ ನಮಃ. ಟಂಕಿನೇ ನಮಃ. ಠಳಕಾಯ ನಮಃ. ಬಲಿನೇ ನಮಃ. ಭಗಾಯ ನಮಃ. ಲಕ್ಷ್ಮೀ ನರಸಿಂಹಾಯ ನಮಃ.

ಅರ್ಕಲಿ ಎಂದು ಕರಿಸಿಕೊಳ್ಳುವ ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

ಈ ಷಟ್ಕೋಣ ಮಂಡಲದ ಒಳಗೂ ಹೊರಗೂ ಇರುವ, ಭಗವದ್ರೂಪಗಳೆಲ್ಲಾ, ಅರಿಷಡ್ವರ್ಗಗಳನ್ನು ಸಂಹಾರ ಮಾಡುವ ರೂಪಗಳೆಂದು ಭಾಗವತದಲ್ಲಿ ಹೇಳಿದ್ದಾರೆ. ಈ ರೂಪಗಳ ಸತತ ಚಿಂತನೆಯಿಂದ ಅರಿಷಡ್ವರ್ಗಗಳ ನಾಶವಾಗುತ್ತದೆ.

**ಪ್ರಾರ್ಥನೆ –:**


**ಹೇ ಸ್ವಾಮೀ! ಒಳಗಿನ ಮೊದಲನೆಯ ಕಂಕಣಾಕಾರದಿಂದ ಸ್ವರೂಪ ದೇಹ ಸೂಚಿತವಾಗಿದೆ. ಅದರ ಮೇಲಿನ ತ್ರಿಕೋಣ, ಅದರ ಸುತ್ತಿಲಿನ ವರ್ತುಲ, ಲಿಂಗ ದೇಹವನ್ನು ಸೂಚಿಸುತ್ತಿದೆ. ಅದರ ಮೇಲಿನ ಷಟ್ಕೋಣ ಮಂಡಲ ಜೀವಾಚ್ಛಾದಿಕೆಯೆನ್ನು ಸೂಚಿಸುತ್ತಿದೆ. ಅದರ ಮೇಲಿನ ಕೆಳಮುಖವಾದ, ಷಟ್ಕೋಣ ಮಂಡಲವು ಪರಮಾಚ್ಛಾದಿಕ ಆವರಣವನ್ನು ಸೂಚಿಸುತ್ತಿದೆ. ಈ ಎಲ್ಲ ಕಡೆಗಳಲ್ಲಿ ನಿಯಾಮಕವಾದ, ಪ್ರೇರಕವಾದ, ಚೇಷ್ಟಕವಾಗಿ ನಿಂತಿರುವ, ನಿನ್ನ ಈ ಮಾತೃಕಾರೂಪಗಳಿಗೆ ನಮೋ ನಮಃ. ವಿಷ್ಣು ಷಡಕ್ಷರ ಮಂತ್ರದಂತೆ ಅನೇಕ ಷಡಕ್ಷರ ಮಂತ್ರಗಳಿಗೆ (ಕೃಷ್ಣ ಮಂತ್ರ ಇತ್ಯಾದಿ) ನಿಯಾಮಕವಾದ, ಅನಂತ ಭಗವದ್ರೂಪಗಳಿಂದ ಕೂಡಿದ ಈ ಮಾತೃಕಾ ರೂಪಗಳಿಗೆ ನಮೋ ನಮಃ.**

---

---

## ಅಷ್ಟ ದಳದಲ್ಲಿ ಚಿಂತನೆ

---




**ರೂಪಕ ತಾಳ**

**ಆರು ಕೋಣೆಯ ಮೇಲೆ ವರ್ತುಳಾಕಾರವನ್ನು ।**
**ಚಾರುವಾಗಿ ಬರೆದು ಅದರ ಸುತ್ತಲು ಎಂಟು ।**
**ವಾರಿಜ ದಳವನ್ನು ರಚಿಸಿ ರಮ್ಯವಾಗಿ ।**
**ಸೌರಿ ಸ್ವರ್ಭಾನು ಗುರು ಬುಧ ಶುಕ್ರ ಚಂದ್ರಮ ।**
**ಧಾರುಣಿಸುತ ಕೇತು ಇವರನ್ನ ಮಧ್ಯ ।**
**ಹಾರೈಸಿ ಬರೆದು ಇವರಿವರ ಬಳಿಯಲ್ಲಿ ಓಂ–।**
**ಕಾರ ಸಹಿತವಾಗಿ ನಮೋನಾರಾಯಣನೆಂಬೊ ।**
**ಈರೆರಡು ನಾಲ್ಕು ವರ್ಣಗಳು ವೊಂದೊಂದರಲ್ಲಿ ।**

ಆರಾಧಿಸಿ ಬರೆದು ಬೀಜಾಕ್ಷರವೆನ್ನು ।
ಸಾರವನ್ನು ತಿಳಿ ಎಂಟು ವರ್ಣಮಿಳಿತ ।
ತಾರಮಂತ್ರವೆ ಸತ್ಯ ಇದರ ನಿಯಾಮಕ ವಿಶ್ವ ।
ಮೂರುತಿ ಮೊದಲಾದ ಅಷ್ಟ ರೂಪಂಗಳುಂಟು ।

ಈ ಅಷ್ಟ ದಳ ಕಮಲವು ನಮ್ಮ ಅನಿರುದ್ಧ ದೇಹದ ಸಂಕೇತವಾಗಿದೆ. ಈ ಅನಿರುದ್ಧ ದೇಹದಲ್ಲಿ ಅಜಾದಿ ಮಾತೃಕಾ ವರ್ಣಗಳು, ಭಗವದ್ರೂಪಗಳು, ನಿಯಾಮಕವಾಗಿ ನಿಂತಿವೆ. ಇಲ್ಲಿ 24 ತತ್ವಗಳ ದೇವತೆಗಳೆಲ್ಲರೂ ಪ್ರವೇಶಮಾಡುತ್ತಾರೆ. ಆದರೆ ಇಲ್ಲಿ ಬ್ರಹ್ಮ ವಾಯು ಸರಸ್ವತೀ ಭಾರತೀಯರನ್ನು ಬಿಟ್ಟು ಮಿಕ್ಕವರಿಗೆ ಕಾರ್ಯವಿಲ್ಲ ಎಂದು ಹರಿಕಥಾಮೃತಸಾರದಲ್ಲಿ ಹೇಳಿದಂತೆ ಚಿಂತಿಸಬೇಕು.

**ಅಷ್ಟದಳಗಳಲ್ಲಿ –:**

1. **ಅಷ್ಟದಳದ ಮೊದಲನೆಯ ದಳದಲ್ಲಿ** ನಿಯಾಮಕನಾದ, ನಾರಾಯಣ ಅಷ್ಟಾಕ್ಷರ ಮಂತ್ರದಲ್ಲಿರುವ, ಪ್ರಣವಾಕ್ಷರ ನಿಯಾಮಕನಾದ, ವಿಶ್ವಾಯ ನಮಃ. ಇಂದ್ರಾಂತರ್ಗತ ಉಪೇಂದ್ರಾಯ ನಮಃ. ಶನೈಶ್ಚರಾಂತರ್ಗತ ಲಕ್ಷ್ಮೀನರಸಿಂಹಾಯ ನಮಃ. ಈ ಭಗವದ್ರೂಪಗಳಿಂದ ಅಭಿನ್ನನಾದ, ಬಿಂಬ ಮೂರ್ತಿಗೆ ನಮೋ ನಮಃ.

2. **ಅಷ್ಟದಳದ ಎರಡನೆಯ ದಳದಲ್ಲಿ** ವಿರಾಜಮಾನನಾದ, ಅಷ್ಟಾಕ್ಷರ ಮಂತ್ರದ ಎರಡನೆಯ ವರ್ಣ ಪ್ರತಿಪಾದ್ಯ, ನಿಯಾಮಕ, ತೈಜಸಾಯ ನಮಃ. ಅಗ್ನ್ಯಂತರ್ಗತ ಪರಶುರಾಮಾಯ ನಮಃ. ರಾಹು ಅಂತರ್ಗತ, ಲಕ್ಷ್ಮೀನರಸಿಂಹಾಯ ನಮಃ. ಈ ಭಗವದ್ರೂಪಗಳಿಂದ ಅಭಿನ್ನನಾದ, ಬಿಂಬ ಮೂರ್ತಿಗೆ ನಮೋ ನಮಃ.

3. **ಅಷ್ಟದಳದ ಮೂರನೆಯ ದಳದಲ್ಲಿ** ವಿರಾಜಮಾನನಾದ, ಅಷ್ಟಾಕ್ಷರ ಮಂತ್ರದ ಮೂರನೆಯ ವರ್ಣ ಪ್ರತಿಪಾದ್ಯ, ನಿಯಾಮಕ, ಪ್ರಾಜ್ಞಾಯ ನಮಃ. ಯಮಾಂತರ್ಗತ ಶ್ರೀ ರಾಮಾಯ ನಮಃ. ಬೃಹಸ್ಪತ್ಯಂತರ್ಗತ ಲಕ್ಷ್ಮೀನರಸಿಂಹಾಯ ನಮಃ. ಈ ಭಗವದ್ರೂಪಗಳಿಂದ ಅಭಿನ್ನನಾದ, ಬಿಂಬ ಮೂರ್ತಿಗೆ ನಮೋ ನಮಃ.

4. **ಅಷ್ಟದಳದ ನಾಲ್ಕನೆಯ ದಳದಲ್ಲಿ** ವಿರಾಜಮಾನನಾದ, ಅಷ್ಟಾಕ್ಷರ ಮಂತ್ರದ ನಾಲ್ಕನೆಯ ವರ್ಣ ಪ್ರತಿಪಾದ್ಯ, ನಿಯಾಮಕ, ತುರ್ಯಾಯ ನಮಃ.

ನಿಋತ್ಯಂತರ್ಗತ ಜನಾರ್ದನಾಯ ನಮಃ. ಬುಧಾಂತರ್ಗತ ಲಕ್ಷ್ಮೀನರಸಿಂಹಾಯ ನಮಃ. ಈ ಭಗವದ್ರೂಪಗಳಿಂದ ಅಭಿನ್ನನಾದ, ಬಿಂಬ ಮೂರ್ತಿಗೆ ನಮೋ ನಮಃ.

**5. ಅಷ್ಟದಳದ ಐದನೆಯ ದಳದಲ್ಲಿ** ವಿರಾಜಮಾನನಾದ, ಅಷ್ಟಾಕ್ಷರ ಮಂತ್ರದ ಐದನೆಯ ವರ್ಣ ಪ್ರತಿಪಾದ್ಯ, ನಿಯಾಮಕ, ಆತ್ಮನೇ ನಮಃ. ವರುಣಾಂತರ್ಗತ ಮತ್ಸ್ಯಾಯ ನಮಃ. ಶುಕ್ರಾಂತರ್ಗತ ಲಕ್ಷ್ಮೀನರಸಿಂಹಾಯ ನಮಃ. ಈ ಭಗವದ್ರೂಪಗಳಿಂದ ಅಭಿನ್ನನಾದ, ಬಿಂಬ ಮೂರ್ತಿಗೆ ನಮೋ ನಮಃ.

**6. ಅಷ್ಟದಳದ ಆರನೆ ದಳದಲ್ಲಿ** ವಿರಾಜಮಾನನಾದ, ಅಷ್ಟಾಕ್ಷರ ಮಂತ್ರದ ಆರನೆ ವರ್ಣ ಪ್ರತಿಪಾದ್ಯ, ನಿಯಾಮಕ, ಅಂತರಾತ್ಮನೇ ನಮಃ. ಪ್ರವಹ ವಾಯ್ವಂತರ್ಗತ ಹಯಗ್ರೀವಾಯ ನಮಃ. ಚಂದ್ರಾಂತರ್ಗತ ಲಕ್ಷ್ಮೀನರಸಿಂಹಾಯ ನಮಃ. ಈ ಭಗವದ್ರೂಪಗಳಿಂದ ಅಭಿನ್ನನಾದ, ಬಿಂಬ ಮೂರ್ತಿಗೆ ನಮೋ ನಮಃ.

**7. ಅಷ್ಟದಳದ ಏಳನೆಯ ದಳದಲ್ಲಿ** ವಿರಾಜಮಾನನಾದ, ಅಷ್ಟಾಕ್ಷರ ಮಂತ್ರದ ಏಳನೆ ವರ್ಣ ಪ್ರತಿಪಾದ್ಯ, ನಿಯಾಮಕ, ಪರಮಾತ್ಮನೇ ನಮಃ. ಕುಬೇರಾಂತರ್ಗತ ಕಪಿಲಾಯ ನಮಃ. ಕುಜಾಂತರ್ಗತ ಲಕ್ಷ್ಮೀನರಸಿಂಹಾಯ ನಮಃ. ಈ ಭಗವದ್ರೂಪಗಳಿಂದ ಅಭಿನ್ನನಾದ, ಬಿಂಬ ಮೂರ್ತಿಗೆ ನಮೋ ನಮಃ.


**8. ಅಷ್ಟದಳದ ಎಂಟನೆಯ ದಳದಲ್ಲಿ** ವಿರಾಜಮಾನನಾದ, ಅಷ್ಟಾಕ್ಷರ ಮಂತ್ರದ ಎಂಟನೆ ವರ್ಣ ಪ್ರತಿಪಾದ್ಯ, ನಿಯಾಮಕ, ಜ್ಞಾನಾತ್ಮನೇ ನಮಃ. ರುದ್ರಾಂತರ್ಗತ ನಾರಸಿಂಹಾಯ ನಮಃ. ಕೇತ್ವಂತರ್ಗತ ಲಕ್ಷ್ಮೀನರಸಿಂಹಾಯ ನಮಃ. ಈ ಭಗವದ್ರೂಪಗಳಿಂದ ಅಭಿನ್ನನಾದ, ಬಿಂಬ ಮೂರ್ತಿಗೆ ನಮೋ ನಮಃ.

---

---

# ಅಷ್ಟದಳದ ದಳ ಸಂಧಿಗಳಲ್ಲಿ ಚಿಂತನೆ

---



ಸೌರಿ ರಾಹು ಮಧ್ಯ ಆದಿ ವರ್ಣವೆ ಲಿಪಿಸಿ ।
ದ್ವಿರಷ್ಟ ಮಾತ್ರಾ ವರ್ಗವ ಇದಕೆ ಇಂದಿರಾ ।
ಮಾರುತ ದೇವನ್ನ ಬರೆದು ಶ್ರುತಿ ಕಾಲಗಳ ।
ಈ ರೀತಿಯಿಂದಲಿ ವಿಶ್ವನ್ನ ಸ್ಮರಿಸೆ ।
ಕಾರುಣ್ಯ ಮಾಡುವನು ಮುಂದೆ ಕ ವರ್ಗ ಉ– ।
ಕಾರ ತೈಜಸ ದೇವನ ಬರೆದು ಕ ವರ್ಗಕ್ಕೆ ।
ಧಾರುಣಿ ಉದಕಾಗ್ನಿ ವಾಯು ಗಗನ ಭೂತ ।
ಮೂರೆರಡು ಸ್ಥಾಪಿಸಿ ಅಲ್ಲಿ ಮಾನಿಗಳನ್ನು ।
ತಾರೇಶ–ಸ್ವರ್ಭಾನು ಮಧ್ಯದಲ್ಲಿ ಸಿದ್ಧಾ ।

ಆ ರೋಹಿಣಿಯ-ಗುರು ಈರ್ವರ ನಡುವೆ ಮ- ।
ಕಾರ ಪ್ರಾಜ್ಞ ಮೂರುತಿ ಚ ವರ್ಗ ಒಂದೊಂದಕೆ ।
ಈರೆರಡು ಮೇಲೊಂದು ಜ್ಞಾನೇಂದ್ರಿಯಗಳುಂಟು ।
ವಾರ ವಾರಕೆ ಬಿಡದೆ ತತ್ವೇಶರುಗಳವಾಸ ।
ತೋರುವ ತುರ್ಯದೇವನು ಟ ವರ್ಗಕೈದು ।
ಮೀರದೆ ಕರ್ಮೇಂದ್ರಿಯ ಪಾಣಿ ಪಾದಾದಿ ಪಂಚ ।
ಕಾರಣಿಕರಲ್ಲಿ ವಸ್ವಾದಿ ನಿರ್ಜರರೂ ।
ಸಾರಿರ್ಪೈ ಬುಧ-ಶುಕ್ರ ಅಂತರಾಳದಲ್ಲಿ ವಿ- ।
ಸ್ತಾರ ಇದನೆ ತಿಳಿದು ಶುಕ್ರ-ಚಂದ್ರನ ನಡುವೆ ।
ಭೂರನ್ನ ಆತ್ಮಾಮೂರುತಿ ಬಿಂದು ತ ವರ್ಗ ।
ಪೂರೈಸು ಪಂಚ ತನ್ಮಾತ್ರಗಳು ಶಬ್ದಾದಿ ।
ಮಾರುತಗಳೈದು ಪ್ರಾಣಾದಿ ನಾಮದಲ್ಲಿ ।
ಸೇರಿ ಕೊಂಡಿಪ್ಪರ್ಪೈ ಮುಂದೆ ಲಾಲಿಸಿ ಕೇಳಿ ।
ಗೌರೀಶನ ಶಿರದಲ್ಲಿ ಇಪ್ಪ ಕುಜನ ನಡುವೆ ।
ಮೂರುತಿ ಅಂತರಾತ್ಮನು ಘೋಷ ಪ ವರ್ಗ ।
ಆರನೇ ಮನೆ ಎನ್ನಿ ಇಲ್ಲಿಪ್ಪದು ಅಹಂ- ।
ಕಾರ-ಬುದ್ಧಿ-ಚಿತ್ತ-ಮನಸು-ಚೇತನ ತತ್ವ ।
ಮಾರಾರಿ ಮಿಗಿಲಾದ ದೇವತಿಗಳಕ್ಕು ।
ಧಾರುಣಿಸುತ ಕೇತು ಇವರ ಮಧ್ಯದಲ್ಲಿ ।
ಶ್ರೀರಮಣ ಪರಮಾತ್ಮ ಶಾಂತವೆಂಬೋದು ಓಂ- ।
ಕಾರದೊಳಗಿನ ವರ್ಣ ಯ ವರ್ಗ ಚತುರ್ವಿಧಾ ।
ಆರೊಂದು ಧಾತುಗಳು ತ್ವಕ್-ಚರ್ಮ-ರಕ್ತಾದಿ ।
ವಾರಿಜ ಮಿತ್ರನ್ನ ಮುಸುಕುವನ ಶನಿ ಮಧ್ಯ ।
ಬೀರುವೆನು ಜ್ಞಾನಾತ್ಮ ಅತಿಶಾಂತ ಶ ವರ್ಗ- ।
ಕ್ಷಾಂತ ಸತ್ವ ರಜ ತಮ ತ್ರಯಾವಸ್ಥಿಗಳು ।
ತಾರ ನಮೋ ನಾರಾಯಣವೆಂಬೊವೆಂಟು ।
ಸೌರಿ ಮಿಕ್ಕಾದೆಂಟು ದಳದಲ್ಲಿ ಅಳಿಸೋದು ।
ವಾರಿಜಭವನಯ್ಯ ವಿಜಯವಿಠ್ಠಲರೇಯ ।
ಶರೀರದೊಳಗಿದ್ದು ತನ್ನವಗೆ ತಿಳಿಪುವಾ ॥3॥

**1. ಅಷ್ಟದಳದ ಮೊದಲಿನ ಹಾಗು ಎರಡನೆಯ ದಳಗಳ ಮಧ್ಯೆ** ದಳ ಸಂಧಿಯಲ್ಲಿ, ಪ್ರಣವದ ಭಾಗವಾದ, ಅಕಾರ ವಾಚ್ಯ ವಿಶ್ವಾಯ ನಮಃ. ಆ

ಅಕಾರದಿಂದಲೇ ಹುಟ್ಟಿದ ಅ ಮೊದಲುಗೊಂಡು ಅಃ ಪರಿಯಂತ ಇರುವ, ಹದಿನಾರು ಮಾತೃಕಾ ಪ್ರತಿಪಾದ್ಯ ಭಗವದ್ರೂಪಗಳಿಗೆ ನಮೋ ನಮಃ.

– ಅವ್ಯಕ್ತ ತತ್ವ, ಕಾಲ, ಮತ್ತು, ಅನಂತ ವೇದಗಳಿಗೆ ನಿಯಾಮಕರಾದ, ಮುಖ್ಯಪ್ರಾಣಾಂತರ್ಗತ ಮಹಾ ಲಕ್ಷ್ಮೀ ಸಮೇತ ನಾರಾಯಣಾಯ ನಮೋ ನಮಃ.

**2. ಅಷ್ಟದಳದ ಎರಡನೆಯ ಹಾಗೂ ಮೂರನೆಯ ದಳಗಳ ಮಧ್ಯೆ, ದಳ ಸಂಧಿಯಲ್ಲಿ** ವಿರಾಜಮಾನನಾದ, ಪ್ರಣವದ ಭಾಗವಾದ, ಉಕಾರ ವಾಚ್ಯ ತೈಜಸಾಯ ನಮಃ. ಆ ಉಕಾರದಿಂದದಲೇ ಹುಟ್ಟಿದ ಕ ವರ್ಗ ವರ್ಣಗಳಾದ ಕ, ಖ, ಗ, ಘ, ಙ ಎಂಬ ಮಾತೃಕಾ ವರ್ಣ ಪ್ರತಿಪಾದ್ಯ ಭಗವದ್ರೂಪಗಳಿಗೆ ನಮೋ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಭೂತಗಳಲ್ಲಿ ಪೃಥ್ವಿ ತತ್ವಕ್ಕೆ ಅಭಿಮಾನಿಯಾದ, ಧರಾ ದೇವಿ ಅಂತರ್ಗತ ಮುಖ್ಯಪ್ರಾಣಾಂತರ್ಗತ ಸುಶೀಲಾಪತಿ ಶ್ರೀ ಕೃಷ್ಣಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಭೂತಗಳಲ್ಲಿ ಅಪ್ ತತ್ವದ ಅಭಿಮಾನಿಯಾದ, ವರುಣಾಂತರ್ಗತ ಮುಖ್ಯಪ್ರಾಣಾಂತರ್ಗತ ವಿದ್ಯಾಪತಿ ಶ್ರೀ ಹರಿಯೇ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಭೂತಗಳಲ್ಲಿ ತೇಜಸ್ ತತ್ವದ ಅಭಿಮಾನಿಯಾದ, ಅಗ್ನಿ ಅಂತರ್ಗತ ಮುಖ್ಯಪ್ರಾಣಾಂತರ್ಗತ ಸುಂದರೀಪತಿ ಉಪೇಂದ್ರಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಭೂತಗಳಲ್ಲಿ ವಾಯು ತತ್ವಕ್ಕೆ ಅಭಿಮಾನಿಗಳಾದ ಪ್ರವಾಹ ವಾಯ್ವಂತರ್ಗತ ಮುಖ್ಯಪ್ರಾಣಾಂತರ್ಗತ ಸುಗಂಧೀಪತಿ ಜನಾರ್ದನಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಭೂತಗಳಲ್ಲಿ ಆಕಾಶ ತತ್ವಕ್ಕೆ ಅಭಿಮಾನಿಯಾದ, ಗಣಪತ್ಯಂತರ್ಗತ ಮುಖ್ಯಪ್ರಾಣಾಂತರ್ಗತ ಸುಖಿನೀಪತಿ ಅಚ್ಯುತಾಯ ನಮಃ.

ಈ ಎಲ್ಲಾ ಭಗವದ್ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**3. ಅಷ್ಟದಳದ ಮೂರನೆಯ ಮತ್ತು ನಾಲ್ಕನೆಯ ದಳ ಸಂಧಿಗಳಲ್ಲಿ** ವಿರಾಜಮಾನವಾದ, ಪ್ರಣವದ ಭಾಗವಾದ, ಮ ಕಾರ ವಾಚ್ಯ ಪ್ರಾಜ್ಞಾಯ ನಮಃ. ಆ ಮ ಕಾರದಿಂದಲೆ ಹುಟ್ಟಿದ ಚ ವರ್ಗ ವರ್ಣಗಳಾದ ಚ, ಛ, ಜ, ಝ, ಞ ಎಂಬ ಮಾತೃಕಾ ವರ್ಣ ಪ್ರತಿಪಾದ್ಯ ಭಗವದ್ರೂಪಗಳಿಗೆ ನಮೋ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಜ್ಞಾನೇಂದ್ರಿಯಗಳಲ್ಲಿ ಒಂದಾದ ಶ್ರೋತ್ರಾಭಿಮಾನಿಗಳಾದ ದಿಗ್ದೇವತಾಂತರ್ಯಾಮಿ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಧನ್ಯಾ ಸಮೇತ ಶ್ರೀಧರಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಜ್ಞಾನೇಂದ್ರಿಯಗಳಲ್ಲಿ ಒಂದಾದ ತ್ವಗಭಿಮಾನಿಗಳಾದ ಅಹಂಕಾರಿಕ ಪ್ರಾಣಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ವೃಷಾಕಪಿ ಸಮೇತ ವಾಮನಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಜ್ಞಾನೇಂದ್ರಿಯಗಳಲ್ಲಿ ಒಂದಾದ ಘ್ರಾಣಾಭಿಮಾನಿಗಳಾದ ಅಶ್ವಿನೀ ದೇವತಾಂತರ್ಗತ ಭಾರತೀಮುಖ್ಯಪ್ರಾಣಾಂತರ್ಗತ ರಮಾ ತ್ರಿವಿಕ್ರಮಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಜ್ಞಾನೇಂದ್ರಿಯಗಳಲ್ಲಿ ಒಂದಾದ ರಸನೇಂದ್ರಿಯಕ್ಕೆ ಅಭಿಮಾನಿಗಳಾದ ವರುಣಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಕಮಲಾ ಮಧುಸೂದನಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಜ್ಞಾನೇಂದ್ರಿಯಗಳಲ್ಲಿ ಒಂದಾದ ಚಕ್ಷುರಿಂದ್ರಿಯ ನಿಯಾಮಕ, ಸೂರ್ಯಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಪದ್ಮಿನೀ ವಿಷ್ಣವೇ ನಮಃ.

ಈ ಎಲ್ಲಾ ಭಗವದ್ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**4. ಅಷ್ಟದಳದ ನಾಲ್ಕನೆಯ ಮತ್ತು ಐದನೆಯ ದಳ ಸಂಧಿಗಳಲ್ಲಿ** ವಿರಾಜಮಾನವಾದ, ಪ್ರಣವದ ಭಾಗವಾದ, ನಾದ ಪ್ರತಿಪಾದ್ಯ ತುರ್ಯಾಯ ನಮಃ. ಆ ನಾದದಿಂದಲೇ ಹೊರ ಬಂದ ಟ ವರ್ಗ ಟ, ಠ, ಡ, ಢ, ಣ ಎಂಬ ಮಾತೃಕಾ ವರ್ಣ ಪ್ರತಿಪಾದ್ಯ ಭಗವದ್ರೂಪಗಳಿಗೆ ನಮೋ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಕರ್ಮೇಂದ್ರಿಯಗಳಲ್ಲಿ ವಾಗಭಿಮಾನಿಯಾದ, ಅಗ್ನ್ಯಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಮಂಗಲಾಪತಿ ಶ್ರೀ **ಹೃಷೀಕೇಶಾಯ** ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಕರ್ಮೇಂದ್ರಿಯಗಳಲ್ಲಿ ಪಾಣೀಂದ್ರಿಯ ಅಭಿಮಾನಿಯಾದ ದಕ್ಷಪ್ರಜಾಪತ್ಯಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಬುದ್ಧಿಪತಿ ಶ್ರೀ ಪದ್ಮನಾಭಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಕರ್ಮೇಂದ್ರಿಯಗಳಲ್ಲಿ ಪಾದಾಭಿಮಾನಿಯಾದ, ಜಯಂತಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಇಂದಿರಾ ಶ್ರೀ ದಾಮೋದರಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಕರ್ಮೇಂದ್ರಿಯಗಳಲ್ಲಿ ಪಾಯು ಅಭಿಮಾನಿಯಾದ, ಮಿತ್ರ ನಾಮಕ ಸೂರ್ಯಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಹರಿಣೀ ಶ್ರೀ ಸಂಕರ್ಷಣಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಕರ್ಮೇಂದ್ರಿಯಗಳಲ್ಲಿ ಉಪಸ್ಥಾಭಿಮಾನಿಯಾದ, ಸ್ವಾಯಂಭುವ ಮನ್ವಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ದಕ್ಷಿಣಾ ಶ್ರೀ ವಾಸುದೇವಾಯ ನಮಃ.

ಈ ಎಲ್ಲಾ ಭಗವದ್ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**5. ಅಷ್ಟದಳದ ಐದನೆಯ ಮತ್ತು ಆರನೆ ದಳ ಸಂಧಿಗಳಲ್ಲಿ** ವಿರಾಜಮಾನವಾದ, ಪ್ರಣವದ ಭಾಗವಾದ, ಬಿಂದು ಪ್ರತಿಪಾದ್ಯ ಆತ್ಮನೇ ನಮಃ. ಆ ಬಿಂದುವಿನಿಂದಲೇ ಹುಟ್ಟಿದ ವರ್ಣಗಳಾದ ತ, ಥ, ದ, ಧ, ನ ಎಂಬ ಮಾತೃಕಾ ರೂಪ ಪ್ರತಿಪಾದ್ಯ ಭಗವದ್ರೂಪಗಳಿಗೆ ನಮೋ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ತನ್ಮಾತ್ರೆಗಳಲ್ಲಿ ಶಬ್ದ ತನ್ಮಾತ್ರ ನಿಯಾಮಕರಾದ, ಬೃಹಸ್ಪತಿ, ಪ್ರಾಣಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ನಿತ್ಯಾಪತಿ ಪ್ರದ್ಯುಮ್ನಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ತನ್ಮಾತ್ರೆಗಳಲ್ಲಿ ಸ್ಪರ್ಶ ತನ್ಮಾತ್ರ ನಿಯಾಮಕರಾದ, ಅಪಾನಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಆನಂದಾಪತಿ ಅನಿರುದ್ಧಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ತನ್ಮಾತ್ರೆಗಳಲ್ಲಿ ರೂಪ ತನ್ಮಾತ್ರ ನಿಯಾಮಕರಾದ, ವ್ಯಾನಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಸದಾಶ್ರಯಾ ಪುರುಷೊತ್ತಮಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ತನ್ಮಾತ್ರೆಗಳಲ್ಲಿ ರಸ ತನ್ಮಾತ್ರ ನಿಯಾಮಕರಾದ, ಉದಾನಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶುಚೀಪತಿ ಅಧೊಕ್ಷಜಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ತನ್ಮಾತ್ರೆಗಳಲ್ಲಿ ಗಂಧ ತನ್ಮಾತ್ರ ನಿಯಾಮಕರಾದ, ಸಮಾನಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಯಜ್ಞೇಶೀಪತಿ ನಾರಸಿಂಹಾಯ ನಮಃ.

ಈ ಎಲ್ಲಾ ಭಗವದ್ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**6. ಅಷ್ಟದಳದ ಆರನೆ ಮತ್ತು ಏಳನೆ ದಳ ಸಂಧಿಗಳಲ್ಲಿ** ವಿರಾಜಮಾನವಾದ, ಪ್ರಣವದ ಭಾಗವಾದ, ಘೋಷ ಪ್ರತಿಪಾದ್ಯ ಅಂತರಾತ್ಮನೆ ನಮಃ. ಆ ಘೋಷದಿಂದಲೇ ಹುಟ್ಟಿದ ವರ್ಣಗಳಾದ ಪ, ಫ, ಬ, ಭ, ಮ ಎಂಬ ಮಾತೃಕಾ ರೂಪ ಪ್ರತಿಪಾದ್ಯ ಭಗವದ್ರೂಪಗಳಿಗೆ ನಮೋ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಮನೋವೃತ್ತಿಗಳಲ್ಲಿ ಅಹಂಕಾರ ನಿಯಾಮಕರಾದ, ರುದ್ರಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶಾಂತೀಪತಿ ಅನಿರುದ್ಧಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಮನೋವೃತ್ತಿಗಳಲ್ಲಿ ಬುದ್ಧಿ ನಿಯಾಮಕರಾದ, ಉಮಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಕೃತಿಪತಿ ಪ್ರದ್ಯುಮ್ನಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಮನೋವೃತ್ತಿಗಳಲ್ಲಿ ಮನಸ್ಸಿಗೆ ನಿಯಾಮಕರಾದ, ಇಂದ್ರ ಕಾಮಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಜಯಾಪತಿ ಸಂಕರ್ಷಣಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಮನೋವೃತ್ತಿಗಳಲ್ಲಿ ಚಿತ್ತಕ್ಕೆ ನಿಯಾಮಕರಾದ, ಗರುಡಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಮಾಯಾಪತಿ ವಾಸುದೇವಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಪಂಚ ಮನೋವೃತ್ತಿಗಳಲ್ಲಿ ಚೇತನಕ್ಕೆ ನಿಯಾಮಕರಾದ, ಶೇಷಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಲಕ್ಷ್ಮೀನಾರಾಯಣಾಯ ನಮಃ.

ಈ ಎಲ್ಲಾ ಭಗವದ್ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**7. ಅಷ್ಟದಳದ ಏಳನೆ ಮತ್ತು ಎಂಟನೆ ದಳ ಸಂಧಿಗಳಲ್ಲಿ** ವಿರಾಜಮಾನವಾದ, ಪ್ರಣವದ ಭಾಗವಾದ, ಶಾಂತ ಪ್ರತಿಪಾದ್ಯ ಪರಮಾತ್ಮನೇ ನಮಃ. ಆ ಶಾಂತದಿಂದಲೇ ಹುಟ್ಟಿದ ವರ್ಣಗಳಾದ ಯ, ರ, ಲ, ವ ಎಂಬ ಮಾತೃಕಾ ರೂಪ ಪ್ರತಿಪಾದ್ಯ ಭಗವದ್ರೂಪಗಳಿಗೆ ನಮೋ ನಮಃ.

– ಇಲ್ಲಿಯೇ ವಿರಾಜಮಾನರಾದ, ಸಪ್ತ ಧಾತುಗಳಲ್ಲಿ ತ್ವಗಭಿಮಾನಿಗಳಾದ ಸಪ್ತ ಮರುತ್ತುಗಳಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ನಿಧನ ನಾಮಕ ಸಾಮ ಪ್ರತಿಪಾದ್ಯ ಜಯಾಪತಿ ಸಂಕರ್ಷಣಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಸಪ್ತ ಧಾತುಗಳಲ್ಲಿ ಚರ್ಮಾಭಿಮಾನಿಗಳಾದ ಸಪ್ತ ಮರುತ್ತುಗಳಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಹಿಂಕಾರ ನಾಮಕ ಸಾಮ ಪ್ರತಿಪಾದ್ಯ ಕೃತಿಪತಿ ಪ್ರದ್ಯುಮ್ನಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಸಪ್ತ ಧಾತುಗಳಲ್ಲಿ ಮಾಂಸಾಭಿಮಾನಿಗಳಾದ ಸಪ್ತ ಮರುತ್ತುಗಳಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಪ್ರಸ್ತಾವ ನಾಮಕ ಸಾಮ ಪ್ರತಿಪಾದ್ಯ ಮಾಯಾಪತಿ ವಾಸುದೇವಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಸಪ್ತ ಧಾತುಗಳಲ್ಲಿ ರುಧಿರಾಭಿಮಾನಿಗಳಾದ ಸಪ್ತ ಮರುತ್ತುಗಳಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಆದಿ ನಾಮಕ ಸಾಮ ಪ್ರತಿಪಾದ್ಯ ಭೂವರಾಹಾಯ ನಮಃ.

– ಇಲ್ಲಿಯೇ ವಿರಾಜಮಾನರಾದ, ಸಪ್ತ ಧಾತುಗಳಲ್ಲಿ ಮೇಧೋಭಿಮಾನಿಗಳಾದ ಸಪ್ತ ಮರುತ್ತುಗಳಂತರ್ಗತ ಭಾರತೀರಮಣ

**ಮುಖ್ಯಪ್ರಾಣಾಂತರ್ಗತ ಪ್ರತೀಹಾರ ನಾಮಕ ಸಾಮ ಪ್ರತಿಪಾದ್ಯ ಶಾಂತೀಪತಿ ಅನಿರುದ್ಧಾಯ ನಮಃ.**

**– ಇಲ್ಲಿಯೇ ವಿರಾಜಮಾನರಾದ, ಸಪ್ತ ಧಾತುಗಳಲ್ಲಿ ಮಜ್ಜಾಭಿಮಾನಿಗಳಾದ ಸಪ್ತ ಮರುತ್ತುಗಳಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಉದ್ಗೀಥ ನಾಮಕ ಸಾಮ ಪ್ರತಿಪಾದ್ಯ ಲಕ್ಷ್ಮೀನಾರಾಯಣಾಯ ನಮಃ.**

**– ಇಲ್ಲಿಯೇ ವಿರಾಜಮಾನರಾದ, ಸಪ್ತ ಧಾತುಗಳಲ್ಲಿ ಅಸ್ಥಿ ಅಭಿಮಾನಿಗಳಾದ ಸಪ್ತ ಮರುತ್ತುಗಳಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಉಪದ್ರವ ನಾಮಕ ಸಾಮ ಪ್ರತಿಪಾದ್ಯ ಯಜ್ಞೇಶೀ ನಾರಸಿಂಹಾಯ ನಮಃ.**

**ಈ ಎಲ್ಲಾ ಭಗವದ್ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.**

**8. ಎಂಟನೆ ಮತ್ತು ಮೊದಲಿನ ದಳ ಸಂಧಿಗಳಲ್ಲಿ ವಿರಾಜಮಾನವಾದ, ಪ್ರಣವದ ಭಾಗವಾದ, ಅತಿಶಾಂತ ಪ್ರತಿಪಾದ್ಯ ಜ್ಞಾತ್ಮನೇ ನಮಃ. ಆ ಅತಿಶಾಂತದಿಂದಲೇ ಹುಟ್ಟಿದ ವರ್ಣಗಳಾದ ಶ, ಷ, ಸ, ಹ, ಳ, ಕ್ಷ ಎಂಬ ಮಾತೃಕಾ ರೂಪ ಪ್ರತಿಪಾದ್ಯ ಭಗವದ್ರೂಪಗಳಿಗೆ ನಮೋ ನಮಃ.**

**– ಇಲ್ಲಿಯೇ ವಿರಾಜಮಾನರಾದ, ಸತ್ವ ಗುಣ ನಿಯಾಮಕ, ಅವ್ಯಕ್ತ ತತ್ವ ಪ್ರೇರಕ, ಜಾಗೃದಾವಸ್ಥಾ ನಿಯಾಮಕ, ವಿಶ್ವಾಯ ನಮಃ.**

**– ಇಲ್ಲಿಯೇ ವಿರಾಜಮಾನರಾದ, ರಜೋ ಗುಣ ನಿಯಾಮಕ, ಮಹತತ್ವ ಪ್ರೇರಕ, ಸ್ವಪ್ನಾವಸ್ಥಾ ನಿಯಾಮಕ, ತೈಜಸಾಯ ನಮಃ.**

**– ಇಲ್ಲಿಯೇ ವಿರಾಜಮಾನರಾದ, ತಮೋ ಗುಣ ನಿಯಾಮಕ, ಅಹಂಕಾರ ತತ್ವ ಪ್ರೇರಕ, ಸುಷುಪ್ತ್ಯಾವಸ್ಥ ನಿಯಾಮಕ, ಪ್ರಾಜ್ಞಾಯ ನಮಃ.**

**ಈ ಎಲ್ಲಾ ಭಗವದ್ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.**


**ಪ್ರಾರ್ಥನೆ –:**
**ಹೇ ತತ್ವಾಭಿಮಾನಿಗಳಿರಾ! ನಿಮ್ಮೆಲ್ಲರ ಪಾದಕ್ಕೆ ಶರಣಾಗತನಾಗಿದ್ದೇನೆ, ಮುಖ್ಯಪ್ರಾಣದೇವರ ಅನುಗ್ರಹದಿಂದ ಹರಿಯೇ ಸ್ವತಂತ್ರ, ಜೀವ ಅಸ್ವತಂತ್ರ,**

ಸದಾ ದೇವರ ಅಧೀನನಾಗಿದ್ದೇನೆ ಎಂಬ ನಿಶ್ಚಯ ಜ್ಞಾನ ಪೂರ್ವಕ ಸಕಲ ಕರ್ಮಗಳನ್ನು ಮಾಡಿ ಮಾಡಿಸುವ ಶ್ರೇಷ್ಠ ಜ್ಞಾನಿಗಳು ನೀವು. ಮೂಲೇಶ ನಾಮಕ ಭಗವಂತನು ನಿಮ್ಮ ನಿಮ್ಮ ಸ್ಥಾನಗಳಿಗೆ ಬಂದಾಗ ನೀವು ನನ್ನಿಂದ ಮಾಡಿಸಿದ ಸಕಲ ಕರ್ಮಗಳನ್ನು ಹೃದಯ ಚಕ್ರಾಬ್ಜ ಮಂಡಲದಲ್ಲಿದ್ದುಕೊಂಡು ಸಮರ್ಪಣೆ ಮಾಡುತ್ತೀರಿ. ಹಾಗೆಯೇ ಅತ್ಯಂತ ದೀನನಾದ, ನನ್ನ 24 ತತ್ವಗಳು ದೇವರ ಕಡೆಯೇ ಸದಾ ಇರಲಿ ಎಂದು ಭಗವಂತನಲ್ಲಿ ನೀವೆಲ್ಲರೂ ಪ್ರಾರ್ಥನೇ ಮಾಡಿ. ನನ್ನನ್ನು ಕೃಪಾ ದೃಷ್ಟಿಯಿಂದ ನೊಡದೇ ಹೊರತು ಉಧೃತನಾಗಲಾರೆ. ನಿಮ್ಮ ಶರಣಾಗತನಾದ, ನನ್ನ ಮೇಲೆ ದಯೆ ತೋರಿ ರಕ್ಷಣೆ ಮಾಡಿ.

ಅಷ್ಟದಳ ಮಧ್ಯೆ ಇರುವ, ಅನೇಕ ಅಷ್ಟಾಕ್ಷರ ಮಂತ್ರಗಳ ಪ್ರತಿಪಾದ್ಯ ಭಗವನ್ಮೂರ್ತಿಗಳಿಂದ ಅಭಿನ್ನವಾದ ಮಾತೃಕಾ ರೂಪಗಳಿಗೆ ನಮೋ ನಮಃ.

---

# ದ್ವಾದಶ ದಳ ಚಿಂತನೆ




**ಝಂಪೆತಾಳ**

**ಹನ್ನೆರಡು ದಳವುಳ್ಳ ಕಮಲ ವಲಯಾಕಾರ ।**
**ಚನ್ನಾಗಿ ಬರೆಯುವುದು ಇದರ ಮೇಲೆ ।**
**ಇನ್ನು ಒಂದೊಂದು ದಳದೊಳಗೆ ಅಬಿಸಲಿಬೇಕು ।**
**ಮನ್ನಿ ಪದು ಜ್ಞಾನಿಗಳು ಬಾಲಬೋಧ ।**
**ಮುನ್ನಾದಿ ದಳದಲ್ಲಿ ಮೇಷರಾಶಿಯ ಬರೆದು ।**
**ಬಿನ್ನಣದಿ 'ಓಂ ಓಂ' ಇದಕೆ ಕೇಶವಮೂರ್ತಿ ।**
**ಭಿನ್ನ ವರ್ಣಂಗಳು 'ಅ ಕ ಡ ಮ' ವೆಂಬವು ನಾಲ್ಕು ।**
**ಇನ್ನಿತು ರಚಿಸಿ ಎರಡನೇದಳದಲ್ಲಿ ।**

ಸನ್ನುತಿಸು ವೃಷಭ 'ಆ ಖ ಥ ಯ' ಚತುರವರ್ಣಗಳು ।
'ಓಂ ನಂ' ನಾರಾಯಣ ಮೂರ್ತಿ ನೆನೆದು ।
ಘನ್ನ ಮೂರನೆ ದಳದಿ ಮಿಥುನ ರಾಶಿಯ ಬಳಿಯ ।
ವರ್ಣಿಸಿ 'ಓಂ ಮೋಂ' ಮಾಧವದೇವನ್ನ ।
ಗಣ್ಯ 'ಇ ಗ ಣ ರ' ನಾಲ್ಕು ಮಾತ್ರಗಳ ಬರೆದು ನಿಜ– ।
ವೆನ್ನಿ ನಾಲ್ಕನೆ ದಳಕೆ ಮನಸು ಮಾಡಿ ।
ಪುಣ್ಯವೇ ಉಂಟು ಕರ್ಕರಾಶಿ 'ಈ ಘ ತ ಲ' ।
ವನ್ನು 'ಓಂ ಭಂ' ವರ್ಣ ಗೋವಿಂದನು ।
ನಿನ್ನೊಳಗೆ ತಿಳಿವುದೂ ಐದನೆ ಪತ್ರದಲಿ ।
ಪೆಣ್ಣುಗಳ ಮಧ್ಯದಾ ಪೆಸರಿನ ರಾಶಿ ।
'ಉ ಊ ಙ ಥ ವ' 'ಓಂ ಗಂ' ಇದಕೆ ವಿಷ್ಣುಮೂರ್ತಿ ।
ಕನ್ಯೆಯಲಿ 'ಋ ೠ ಚ ದ ಶ' 'ಓಂ ವಂ' ವರ್ಣ ಮಧುಸೂ– ।
ದನ ದೇವನ ಭಜಿಸು ಷಡ್ದಳದಲ್ಲಿ ।
ಸನ್ಮತವಹುದು ತುಲಾರಾಶಿ 'ಲೃ ಲೄ ಛ ಧ ಷ' ಗಳು ।
ಇನ್ನು ತ್ರಿವಿಕ್ರಮ 'ಓಂ ತೇಂ'(ಓಷ್ಠಾ) ಸಪ್ತಮ ದಳದಿ ।
ಮಣ್ಣು ಭಕ್ಷಿಪ ಕ್ರಿಮಿ 'ಏ ಐ ಜ ನ ಸ' ವರ್ಣ ।
'ಓಂ ವಾಂ' ವಾಮನ ಅಷ್ಟಮ ದಳದಿ ।
ಹೊನ್ನಿನಂಥ ಮಾತು ಧನು ರಾಶಿ ಅಪಿಸೆ ಸಂ– ।
ಪನ್ನ 'ಓ ಝ ಪ ಹ' 'ಓಂ ಸುಂ' ಶ್ರೀಧರ ।
ಇನ್ನು ನೋಡು ಪತ್ರ ನವಮದಲಿ ಈ ಪರಿ ।
ಎನ್ನು ಗ್ರಹಿಸುವುದು ಹತ್ತು ದಳದಿ ।
ಇನ್ನಿತಾದರು ಸತ್ಯ ಮಕರ 'ಔ ಞ ಫ ಳ' 'ಓಂ ದೇಂ' ।
ಅನಂತರೂಪಾತ್ಮಕ ಹೃಷೀಕೇಶ ।
ಹನ್ನೊಂದನೆ ದಳದಲ್ಲಿ ಕುಂಭ ।
'ಅಂ ಟ ಭ ಕ್ಷ' 'ಓಂ' ।
ಎನ್ನು 'ವಾಂ' ಇದಕೆ ಶ್ರೀ ಪದ್ಮನಾಭ ।
ಹನ್ನೆರಡನೇ ದಳದಿ ಮೀನ 'ಅಃ ಠ ಭ' ವರ್ಣ ।
ಚೆನ್ನಾಗಿ ರಚಿಸಿ 'ಓಂ ಯಂ' ದಾಮೋದರ ।
ಹನ್ನೆರಡು ದಳದೊಳಗೆ ಇಷ್ಟೆ ಭಗವದ್ರೂಪ ।
ಹನ್ನೆರಡು ಮಾತೃಕೆಯ ಕೂಡಿಸಲು ।
'ಓಂ ನಮೊ ಭಗವತೆ ವಾಸುದೇವಾಯ' ಪ್ರ– ।
ಸನ್ನ ದೇವನ್ನ ನೋಡಿ ಏಕಪಂಚಾಶ–।

ದ್ವರ್ಣ ಓಂದೊಂದರಲಿ ಹಂಚಿ ಹಾಕಿ ।
ಹನ್ನೆರಡು ರಾಶಿಗಳ ಬರೆದು ಸ್ತುತಿಸಿ ।

ಇಲ್ಲಿ ಸೂಕ್ಷ್ಮದೇಹದ ಚಿಂತನೆಯನ್ನು ಮಾಡಬೇಕು. ಇಲ್ಲಿರುವ, ಮಾತೃಕಾ ರೂಪಗಳು, ಸೂಕ್ಶ್ಮದೇಹದ ನಿಯಾಮಕ ರೂಪಗಳು

**1. ದ್ವಾದಶ ದಳಗಳಲ್ಲಿ ಮೊದಲನೆಯ ದಳದಲ್ಲಿ** ವಿರಾಜಮಾನನಾದ, ಅ, ಕ, ಡ, ಮ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ದ್ವಾದಶಾಕ್ಷರ ವಿದ್ಯೆಯ ಮೊದಲನೆಯ ವರ್ಣವಾದ, ಪ್ರಣವ ಪ್ರತಿಪಾದ್ಯನಾದ, ಶಿರಸ್ಥಾನದಲ್ಲಿರುವ, ಕೇಶವನಿಗೆ ನಮೋ ನಮಃ.

– ವಿಷ್ಕಂಬ ಯೋಗ ನಾಲ್ಕು ಪಾದಗಳಿಗೂ, ಪ್ರೀತಿ ಯೋಗದ ನಾಲ್ಕು ಪಾದಗಳಿಗೂ, ಆಯುಷ್ಮಾನ್ ಯೋಗದ ಮೊದಲನೆಯ ಪಾದದ ಪ್ರವರ್ತಕನಾದ ಹಾಗೂ ಅಶ್ವಿನೀ ನಾಲ್ಕು ಪಾದ, ಭರಣಿ ನಾಲ್ಕು ಪಾದ, ಕೃತ್ತಿಕ ಮೊದಲನೆಯ ಪಾದ ಪ್ರವರ್ತಕನಾದ, ಮೇಷರಾಶಿ ನಿಯಾಮಕನಾದ, ಕೇಶವನಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**2. ದ್ವಾದಶ ದಳಗಳಲ್ಲಿ ಎರಡನೆಯ ದಳದಲ್ಲಿ** ವಿರಾಜಮಾನನಾದ, ಆ, ಖ, ಢ, ಯ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ದ್ವಾದಶಾಕ್ಷರ ವಿದ್ಯೆಯ ಎರಡನೆಯ ವರ್ಣದ ಪ್ರತಿಪಾದ್ಯನಾಗಿ ನೇತ್ರಸ್ಥಾನದಲ್ಲಿರುವ, ನಾರಾಯಣನಿಗೆ ನಮೋ ನಮಃ.

– ಹೇ ಸ್ವಾಮೀ! ನೀನೆ ಆಯುಷ್ಮಾನ್ ಯೋಗದ ಮೂರು ಪಾದಗಳಿಗೂ, ಸೌಭಾಗ್ಯ ಯೋಗದ ನಾಲ್ಕು ಪಾದಗಳಿಗೂ, ಶೋಭನ ಯೋಗದ ಎರಡು ಪಾದಗಳಿಗೂ ಪ್ರವರ್ತಕನಾಗಿದ್ದೀ ಹಾಗೆಯೇ ಕೃತ್ತಿಕಾ ನಕ್ಷತ್ರದ ಮೂರು ಪಾದಗಳಿಗೂ ರೋಹಿಣೀ ನಕ್ಷತ್ರದ ನಾಲ್ಕು ಪಾದಗಳಿಗೂ, ಮೃಗಶಿರಾ ಎರಡು ಪಾದಗಳಿಗೂ ಇವುಗಳಿಂದ ಕೂಡಿದ ವೃಷಭ ರಾಶಿಗೂ ಪ್ರವರ್ತಕನಾಗಿದ್ದೀಯಾ. ನಿನ್ನ ಈ ರೂಪಗಳಿಗೆಲ್ಲ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**3. ದ್ವಾದಶ ದಳಗಳಲ್ಲಿ ಮೂರನೆಯ ದಳದಲ್ಲಿ** ವಿರಾಜಮಾನನಾದ, ಇ, ಗ, ಙ, ರ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ವಾಸುದೇವ ದ್ವಾದಶಾಕ್ಷರ ವಿದ್ಯೆಯ ಮೂರನೆಯ ವರ್ಣದ ಪ್ರತಿಪಾದ್ಯನಾಗಿ ನಾಸಾಸ್ಥಾನದಲ್ಲಿ ನಿಂತಿರುವ, ಮಾಧವನಿಗೆ ನಮೋ ನಮಃ.

– ಹೇ ಸ್ವಾಮೀ! ನೀನೆ ಶೋಭನ ಯೋಗದ ಎರಡು ಪಾದಗಳಿಗೂ, ಅತಿಗಂಡ ಯೋಗದ ನಾಲ್ಕು ಪಾದಗಳಿಗೂ, ಸುಕರ್ಮ ಯೋಗದ ಮೂರು ಪಾದಗಳಿಗೂ ಪ್ರವರ್ತಕನಾಗಿದ್ದೀಯಾ. ಹಾಗೆಯೇ ಮೃಗಶಿರಾ ನಕ್ಷತ್ರದ ಮೂರು–ನಾಲ್ಕು ಪಾದಗಳಿಗೂ, ಆರ್ದ್ರಾ ನಕ್ಷತ್ರದ ನಾಲ್ಕು ಪಾದಗಳಿಗೂ, ಪುನರ್ವಸು ಮೂರು ಪಾದಗಳಿಗೆ ಪ್ರವರ್ತಕನಾಗಿ ಮಿಥುನ ರಾಶಿಗೆ ಪ್ರವರ್ತಕನಾಗಿದ್ದೀಯಾ. ನಿನ್ನ ಈ ರೂಪಗಳಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**4. ದ್ವಾದಶ ದಳಗಳಲ್ಲಿ ನಾಲ್ಕನೆಯ ದಳದಲ್ಲಿ** ವಿರಾಜಮಾನನಾದ, ಈ, ಘ, ತ, ಲ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ವಾಸುದೇವ ದ್ವಾದಶಾಕ್ಷರ ವಿದ್ಯೆಯ ನಾಲ್ಕನೆಯ ವರ್ಣ ಪ್ರತಿಪಾದ್ಯನಾಗಿ ಮುಖಸ್ಥಾನದಲ್ಲಿ ನಿಂತಿರುವ, ಗೋವಿಂದನಿಗೆ ನಮೋ ನಮಃ.

– ಹೇ ಸ್ವಾಮೀ! ನೀನೆ ಸುಕರ್ಮ ಯೋಗದ ನಾಲ್ಕನೆಯ ಪಾದಕ್ಕೂ, ಧೃತಿ ಯೋಗದ ನಾಲ್ಕು ಪಾದಗಳಿಗೂ, ಶೂಲ ಯೋಗದ ನಾಲ್ಕು ಪಾದಗಳಿಗೂ ಪ್ರವರ್ತಕನಾಗಿದ್ದೀಯಾ ಹಾಗೆಯೇ ಪುನರ್ವಸು ನಕ್ಷತ್ರದ ನಾಲ್ಕನೆಯ ಪಾದಕ್ಕೂ, ಪುಷ್ಯ ನಕ್ಷತ್ರದ ನಾಲ್ಕು ಪಾದಗಳಿಗೂ, ಆಶ್ಲೇಷಾ ನಕ್ಷತ್ರದ ನಾಲ್ಕು ಪಾದಗಳಿಗೂ ಅವುಗಳಿಂದ ಕೂಡಿದ ಕಟಕ ರಾಶಿಗೂ ಪ್ರವರ್ತಕನಾಗಿದ್ದೀಯಾ. ಆ ನಿನ್ನ ರೂಪಗಳಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**5. ದ್ವಾದಶ ದಳಗಳಲ್ಲಿ ಐದನೆಯ ದಳದಲ್ಲಿ** ವಿರಾಜಮಾನನಾದ, ಉ, ಊ, ಞ, ಥ, ವ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ವಾಸುದೇವ ದ್ವಾದಶಾಕ್ಷರ ವಿದ್ಯೆಯ ಐದನೆಯ ವರ್ಣ ಪ್ರತಿಪಾದ್ಯನಾಗಿ ಪಾದಸ್ಥಾನದಲ್ಲಿ ನಿಂತಿರುವ, ವಿಷ್ಣವೇ ನಮೋ ನಮಃ.

– ಹೇ ಸ್ವಾಮೀ! ನೀನೆ ಗಂಡ ಯೋಗದ ನಾಲ್ಕು ಪಾದಗಳಿಗೆ, ವೃದ್ಧಿ ಯೋಗದ ನಾಲ್ಕು ಪಾದಗಳಿಗೆ, ಧೃವ ಯೋಗದ ಮೊದಲನೆಯಪಾದಕ್ಕೆ

ಪ್ರವರ್ತಕನಾಗಿದ್ದೀಯಾ ಹಾಗೆಯೇ ಮಖಾ ನಕ್ಷತ್ರದ ನಾಲ್ಕು ಪಾದಗಳಿಗೂ, ಪೂರ್ವ ಫಲ್ಗುಣೀ ನಕ್ಷತ್ರದ ನಾಲ್ಕು ಪಾದಗಳಿಗೂ, ಉತ್ತರ ಫಲ್ಗುಣೀ ನಕ್ಷತ್ರದ ಮೊದಲನೆಯಪಾದಕ್ಕೂ ಅವುಗಳಿಂದ ಕೂಡಿದ ಸಿಂಹ ರಾಶಿಗೂ ಪ್ರವರ್ತಕನಾಗಿದ್ದೀಯಾ. ನಿನ್ನ ಈ ರೂಪಗಳಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**6. ದ್ವಾದಶ ದಳಗಳಲ್ಲಿ ಆರನೆಯ ದಳದಲ್ಲಿ** ವಿರಾಜಮಾನನಾದ, ಋ, ೠ, ಚ, ದ, ಶ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ವಾಸುದೇವ ದ್ವಾದಶಾಕ್ಷರ ವಿದ್ಯೆಯ ಆರನೆಯ ವರ್ಣ ಪ್ರತಿಪಾದ್ಯನಾಗಿ ಜಾನುಸ್ಥಾನದಲ್ಲಿ ನಿಂತಿರುವ, ಮಧುಸೂದನನೇ ನಮೋ ನಮಃ.

– ಹೇ ಸ್ವಾಮೀ! ನೀನೆ ಉತ್ತರ ಫಾಲ್ಗುಣೀ ನಕ್ಷತ್ರದ ಎರಡು ಮೂರು ನಾಲ್ಕು ಪಾದಗಳ, ಹಸ್ತಾ ನಕ್ಷತ್ರದ ನಾಲ್ಕು ಪಾದಗಳ ಚಿತ್ತಾ ನಕ್ಷತ್ರದ ಮೊದಲೆರಡು ಪಾದಗಳಿಂದ ಕೂಡಿದ ಕನ್ಯಾ ರಾಶಿಗೂ ಹಾಗೆಯೇ ಧೃವ ಯೋಗದ ಮೂರು ಪಾದಗಳಿಗೂ ವ್ಯಾಘಾತ ಯೋಗದ ನಾಲ್ಕು ಪಾದಗಳಿಗೂ ಹರ್ಷಣ ಮೊದಲೆರಡು ಪಾದಗಳಿಗೂ ಪ್ರವರ್ತಕನಾಗಿದ್ದೀಯಾ. ನಿನ್ನ ರೂಪಗಳಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**7. ದ್ವಾದಶ ದಳಗಳಲ್ಲಿ ಏಳನೆಯ ದಳದಲ್ಲಿ** ವಿರಾಜಮಾನನಾದ, ಲೃ, ಲೄ, ಛ, ಧ, ಷ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ವಾಸುದೇವ ದ್ವಾದಶಾಕ್ಷರ ವಿದ್ಯೆಯ ಏಳನೆಯ ವರ್ಣ ಪ್ರತಿಪಾದ್ಯನಾಗಿ ನಾಭಿಸ್ಥಾನದಲ್ಲಿ ನಿಂತಿರುವ, ಹೇ ತ್ರಿವಿಕ್ರಮ ನಮೋ ನಮಃ.

– ಹೇ ಸ್ವಾಮೀ! ನೀನೆ ಚಿತ್ತಾ ನಕ್ಷತ್ರದ ಕೊನೆ ಎರಡು ಪಾದಗಳಿಗೂ ಸ್ವಾತೀ ನಕ್ಷತ್ರದ ನಾಲ್ಕು ಪಾದಗಳಿಗೂ ವಿಶಾಖಾ ನಕ್ಷತ್ರದ ಮೊದಲ ಮೂರು ಪಾದಗಳಿಂದ ಕೂಡಿದ ತುಲಾ ರಾಶಿಗೆ ಹಾಗೆಯೇ ಹರ್ಷಣ ಯೋಗದ ಕೊನೆ ಎರಡು ಪಾದಗಳಿಗೆ ವಜ್ರ ಯೋಗದ ನಾಲ್ಕು ಪಾದಗಳಿಗೆ ಸಿದ್ಧ ಯೋಗದ ಮೊದಲ ಮೂರು ಪಾದಗಳಿಗೆ ಪ್ರವರ್ತಕನಾಗಿದ್ದೀಯಾ. ನಿನ್ನ ರೂಪಗಳಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**8. ದ್ವಾದಶ ದಳಗಳಲ್ಲಿ ಎಂಟನೆಯ ದಳದಲ್ಲಿ** ವಿರಾಜಮಾನನಾದ, ಏ, ಐ, ಜ, ನ, ಸ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ವಾಸುದೇವ ದ್ವಾದಶಾಕ್ಷರ ವಿದ್ಯೆಯ ಎಂಟನೆಯ ವರ್ಣ ಪ್ರತಿಪಾದ್ಯನಾಗಿ ಹೃದಯಸ್ಥಾನದಲ್ಲಿ ನಿಂತಿರುವ, ವಾಮನನಿಗೆ ನಮೋ ನಮಃ.

– ಹೇ ಸ್ವಾಮೀ! ನೀನೆ ವಿಶಾಖಾ ನಕ್ಷತ್ರದ ನಾಲ್ಕನೆಯ ಪಾದ, ಅನುರಾಧಾ ನಕ್ಷತ್ರದ ನಾಲ್ಕು ಪಾದ, ಜ್ಯೇಷ್ಠಾ ನಕ್ಷತ್ರದ ನಾಲ್ಕು ಪಾದಗಳಿಂದ ಕೂಡಿದ ವೃಶ್ಚಿಕ ರಾಶಿಗೆ ಹಾಗೂ ಸಿದ್ಧಿ ಯೋಗದ ನಾಲ್ಕನೆಯ ಪಾದ ವ್ಯತೀಪಾತ ಯೋಗದ ನಾಲ್ಕು ಪಾದಗಳಿಗೂ ವರಿಯಾನ್ ಯೋಗದ ನಾಲ್ಕು ಪಾದಗಳಿಗೂ ಪ್ರವರ್ತಕನಾಗಿದ್ದೀಯಾ . ನಿನ್ನ ರೂಪಗಳಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**9. ದ್ವಾದಶ ದಳಗಳಲ್ಲಿ ಒಂಬತ್ತನೆಯ ದಳದಲ್ಲಿ** ವಿರಾಜಮಾನನಾದ, ಓ, ಝ, ಪ, ಹ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ವಾಸುದೇವ ದ್ವಾದಶಾಕ್ಷರ ವಿದ್ಯೆಯ ಒಂಬತ್ತನೆಯ ವರ್ಣ ಪ್ರತಿಪಾದ್ಯನಾಗಿ ದಕ್ಷಿಣ ಬಾಹುವಿನ ಸ್ಥಾನದಲ್ಲಿ ನಿಂತಿರುವ, ಶ್ರೀಧರನಿಗೆ ನಮೋ ನಮಃ.

– ಹೇ ಸ್ವಾಮೀ! ನೀನೆ ಮೂಲಾ ನಕ್ಷತ್ರದ ನಾಲ್ಕು ಪಾದಗಳಿಂದ ಪೂರ್ವಾಷಾಢಾ ನಾಲ್ಕು ಪಾದಗಳಿಂದ, ಉತ್ತರಾಷಾಢಾ ನಕ್ಷತ್ರದ ಮೊದಲನೆಯಪಾದದಿಂದ ಕೂಡಿದ ಧನುರ್ ರಾಶಿಗೆ ಹಾಗು ಪರಿಘ ಯೋಗದ ನಾಲ್ಕು ಪಾದಗಳಿಗೂ ಶಿವ ಯೋಗದ ನಾಲ್ಕು ಪಾದಗಳಿಗೂ ಸಿದ್ಧ ಯೋಗದ ಮೊದಲನೆಯಪಾದಕ್ಕೂ ಪ್ರವರ್ತಕನಾಗಿದ್ದೀಯಾ . ನಿನ್ನ ರೂಪಗಳಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**10. ದ್ವಾದಶ ದಳಗಳಲ್ಲಿ ಹತ್ತನೆಯ ದಳದಲ್ಲಿ** ವಿರಾಜಮಾನನಾದ, ಔ, ಞ, ಫ, ಳ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ವಾಸುದೇವ ದ್ವಾದಶಾಕ್ಷರ ವಿದ್ಯೆಯ ಹತ್ತನೆಯ ವರ್ಣ ಪ್ರತಿಪಾದ್ಯನಾಗಿ ವಾಮ ಬಾಹುವಿನ ಸ್ಥಾನದಲ್ಲಿ ನಿಂತಿರುವ, ಹೃಷೀಕೇಶಾಯ ನಮೋ ನಮಃ.

– ಹೇ ಸ್ವಾಮೀ! ನೀನೆ ಉತ್ತರಾಷಾಢಾ ಕೊನೆ ಮೂರು ಪಾದಗಳಿಗೂ ಶ್ರವಣಾ ನಕ್ಷತ್ರದ ನಾಲ್ಕು ಪಾದಗಳಿಗೂ ಧನಿಷ್ಠಾ ನಕ್ಷತ್ರದ ಮೊದಲೆರಡು

ಪಾದಗಳಿಂದ ಕೂಡಿದ ಮಕರ ರಾಶಿಗೂ ಹಾಗು ಸಿದ್ಧ ಯೋಗದ ಕೊನೆ ಮೂರು ಪಾದಗಳಿಗೂ ಸಾಧ್ಯ ಯೋಗದ ನಾಲ್ಕು ಪಾದಗಳಿಗೂ ಶುಭ ಯೋಗದ ಮೊದಲೆರಡು ಪಾದಗಳಿಗೂ ಪ್ರವರ್ತಕನಾಗಿದ್ದೀಯಾ . ನಿನ್ನ ರೂಪಗಳಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**11. ದ್ವಾದಶ ದಳಗಳಲ್ಲಿ ಹನ್ನೊಂದನೆಯ ದಳದಲ್ಲಿ** ವಿರಾಜಮಾನನಾದ, ಅಂ, ಟ, ಬ, ಕ್ಷ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ವಾಸುದೇವ ದ್ವಾದಶಾಕ್ಷರ ವಿದ್ಯೆಯ ಹನ್ನೊಂದನೆಯ ವರ್ಣ ಪ್ರತಿಪಾದ್ಯನಾಗಿ ದಕ್ಷಿಣ ಪೋಷ್ಠದಲ್ಲಿ ನೆಲಸಿರುವ, ಪದ್ಮನಾಭಾಯ ನಮೋ ನಮಃ.

– ಹೇ ಸ್ವಾಮೀ! ನೀನೆ ಧನಿಷ್ಠಾ ನಕ್ಷತ್ರದ ಕೊನೆ ಎರಡು ಪಾದಗಳಿಂದ ಶತಭಿಷಾ ನಕ್ಷತ್ರದ ನಾಲ್ಕು ಪಾದಗಳಿಂದ ಪೂರ್ವಾಭಾದ್ರಾ ಮೊದಲು ಮೂರು ಪಾದಗಳಿಂದ ಕೂಡಿದ ಕುಂಭ ರಾಶಿಗೆ ಹಾಗು ಶುಭ ಯೋಗದ ಕೊನೆ ಎರಡು ಪಾದಗಳ ಶುಕ್ಲ ಯೋಗದ ನಾಲ್ಕು ಪಾದಗಳ ಬ್ರಾಹ್ಮ ಯೋಗದ ಮೊದಲ ಮೂರು ಪಾದಗಳ ಪ್ರವರ್ತಕನಾಗಿದ್ದೀಯಾ . ನಿನ್ನ ರೂಪಗಳಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

**12. ದ್ವಾದಶ ದಳಗಳಲ್ಲಿ ಹನ್ನೆರಡನೆಯ ದಳದಲ್ಲಿ** ವಿರಾಜಮಾನನಾದ, ಅಃ, ಠ, ಭ ಎಂಬ ಮಾತೃಕಾ ರೂಪಗಳಿಂದ ಅಭಿನ್ನನಾದ, ವಾಸುದೇವ ದ್ವಾದಶಾಕ್ಷರ ವಿದ್ಯೆಯ ಹನ್ನೆರಡನೆಯ ವರ್ಣ ಪ್ರತಿಪಾದ್ಯನಾಗಿ ವಾಮ ಪೋಷ್ಠದಲ್ಲಿ ನೆಲಸಿರುವ, ದಾಮೋದರನಿಗೆ ನಮೋ ನಮಃ.


– ಹೇ ಸ್ವಾಮೀ! ನೀನೆ ಪೂರ್ವಾಭಾದ್ರ ನಾಲ್ಕನೆಯ ಪಾದ ಉತ್ತರಾಭಾದ್ರ ನಾಲ್ಕು ಪಾದಗಳಿಗೂ, ರೇವತೀ ನಕ್ಷತ್ರದ ನಾಲ್ಕು ಪಾದಗಳಿಂದ ಕೂಡಿದ ಮೀನ ರಾಶಿಗೆ ಹಾಗು ಬ್ರಾಹ್ಮ ಯೋಗದ ನಾಲ್ಕನೆಯ ಪಾದ ಐಂದ್ರ ಯೋಗದ ನಾಲ್ಕು ಪಾದಗಳಿಗೂ, ವೈಧೃತಿ ಯೋಗದ ನಾಲ್ಕು ಪಾದಗಳಿಗೆ ಪ್ರವರ್ತಕನಾಗಿದ್ದೀಯಾ . ನಿನ್ನ ರೂಪಗಳಿಗೆ ನಮೋ ನಮಃ.

ಈ ರೂಪಗಳಿಂದ ಅಭಿನ್ನನಾದ, ನನ್ನ ಬಿಂಬ ಮೂರ್ತಿಗೆ ನಮೋ ನಮಃ.

---

## ದ್ವಾದಶ ದಳದ ದಳ ಸಂಧಿಗಳಲ್ಲಿ ಚಿಂತನೆ

---




**ಧನ್ಯನಾಗೆಲೊ ಮುಂದೆ ದಳದ ಸಂಧಿಗಳಲ್ಲಿ ।**
**ರನ್ನ ತಾರಯೋಗ ಒಂಭತ್ತು ಪದದಂತೆ ।**
**ಹನ್ನೆರಡು ರಾಶಿಗೆ ವಿಭಾಗ ಮಾಡಿ ।**
**ಪನ್ನಗಶಾಯಿ ಸಿರಿ ವಿಜಯ ವಿಠ್ಠಲನ್ನ ಕಾ– ।**
**ರುಣ್ಯವನು ಪಡೆದು ಚಿಂತಿಸು ಸುಹೃದಯದೊಳಗೆ ॥4॥**


**ಪ್ರಾರ್ಥನೆ –:**

**ರಾಶಿ ನಕ್ಷತ್ರ ಯೋಗ ಇವುಗಳಲ್ಲಿ ನಿಂತಿರುವ, ಕಾಲ ನಾಮಕ ಹರಿ ನಿನ್ನ ಆದರಪೂರ್ವಕವಾದ, ನೆನಪನ್ನು ಸದಾ ಕೊಟ್ಟು ಕಾಪಾಡು.**
**ಸೂಕ್ಷ್ಮದೇಹದಲ್ಲಿರುವ ಅಜಾದಿರೂಪಗಳ ಉಪಕಾರದ ಚಿಂತನೆ ಸದಾ ಕೊಡು ಹರಿಯೆ.**

------------------------------

# ಇಪ್ಪತ್ತ ನಾಲ್ಕು ದಳದ ಚಿಂತನೆ

------------------------------



**ತ್ರಿವಿಡತಾಳ**

**ದ್ವಾದಶದಳವುಳ್ಳ ಕಮಲದ ಮೇಲೆ ।**
**ದ್ವಿದ್ವಾದಶಪತ್ರದ ಕಮಲ ಬರೆದು ।**
**ಸಾಧಿಸು ಓಂದೊಂದು ದಳದ ಮಧ್ಯದಲ್ಲಿ ವಿ– ।**
**ನೋದ ಚತುರವಿಂಶತಿ ವರ್ಣಗಳ ।**
**ವೇದ ಮಾತಾ ಮಂತ್ರ ಇದೆ ಎನ್ನು ಕೇಶವ ।**
**ಮಾಧವಾದಿ ವರ್ಣ ಮೂರ್ತಿಗಳ ।**
**ಪಾದವೇ ಸ್ಮರಿಸುತ್ತ**

**ಮೊದಲೆನಯ ದಳದಲ್ಲಿ ಗಾಯತ್ರೀ ಮಂತ್ರದ ಪ್ರಥಮ ವರ್ಣ** ನಿಯಾಮಕನಾದ, ಅಗ್ನ್ಯಂತರ್ಗತ ಪರಶುರಾಮಾಭಿನ್ನ, ಶ್ರೀ ಕೇಶವಾಯ ನಮಃ.

**ಎರಡನೆಯ ದಳದಲ್ಲಿ ಗಾಯತ್ರೀ ಮಂತ್ರದ ಎರಡನೆಯ ವರ್ಣ** ನಿಯಾಮಕನಾದ, ಪ್ರಜಾಪತ್ಯಂತರ್ಗತ ಲಕ್ಷ್ಮೀನಾರಾಯಣಾಯ ನಮಃ.

**ಮೂರನೆಯ ದಳದಲ್ಲಿ ಗಾಯತ್ರೀ ಮಂತ್ರದ ಮೂರನೆಯ ವರ್ಣ** ನಿಯಾಮಕನಾದ, ಸೋಮಾಂತರ್ಗತ ಕಮಲಾ ಮಾಧವಾಯ ನಮಃ.

**ನಾಲ್ಕನೆಯ ದಳದಲ್ಲಿ ಗಾಯತ್ರೀ ಮಂತ್ರದ ನಾಲ್ಕನೆಯ ವರ್ಣ** ನಿಯಾಮಕನಾದ, ಈಶಾನಾಂತರ್ಗತ ಪದ್ಮಾಗೋವಿಂದಾಯ ನಮಃ.

**ಐದನೆಯ ದಳದಲ್ಲಿ ಗಾಯತ್ರೀ ಮಂತ್ರದ ಐದನೆಯ ವರ್ಣ** ನಿಯಾಮಕನಾದ, ಸವಿತ್ರಂತರ್ಗತ ಪದ್ಮಿನೀ ವಿಷ್ಣವೇ ನಮಃ.

**ಆರನೆಯ ದಳದಲ್ಲಿ ಗಾಯತ್ರೀ ಮಂತ್ರದ ಆರನೆ ವರ್ಣ ನಿಯಾಮಕನಾದ,** ಬೃಹಸ್ಪತ್ಯಂತರ್ಗತ ಕಮಲಾಲಯ ಮಧುಸೂದನಾಯ ನಮಃ.

**ಏಳನೆಯ ದಳದಲ್ಲಿ ಗಾಯತ್ರೀ ಮಂತ್ರದ ಏಳನೆ ವರ್ಣ ನಿಯಾಮಕನಾದ,** ಪೈತೃ ದೇವತಾಂತರ್ಗತ ರಮಾ ತ್ರಿವಿಕ್ರಮಾಯ ನಮಃ.

**ಎಂಟನೆಯ ದಳದಲ್ಲಿ ಗಾಯತ್ರೀ ಮಂತ್ರದ ಎಂಟನೆ ವರ್ಣ** ನಿಯಾಮಕನಾದ, ಭಗ ದೇವತಾಂತರ್ಗತ ವೃಷಾಕಪಿ ಶ್ರೀ ವಾಮನಾಯ ನಮಃ.

**ಒಂಬತ್ತನೆಯ ದಳದಲ್ಲಿ ಗಾಯತ್ರೀ ಮಂತ್ರದ ಒಂಬತ್ತನೆ ವರ್ಣ** ನಿಯಾಮಕನಾದ, ಅರ್ಯಮಾಂತರ್ಗತ ಧನ್ಯಾ ಶ್ರೀಧರಾಯ ನಮಃ.

**ಹತ್ತನೆಯ ದಳದಲ್ಲಿ ಗಾಯತ್ರೀ ಮಂತ್ರದ ಹತ್ತನೆಯ ವರ್ಣ** ನಿಯಾಮಕನಾದ, ಸಾವಿತ್ರ್ಯಂತರ್ಗತ ಮಂಗಲಾ ಶ್ರೀ ಹೃಷೀಕೇಶಾಯ ನಮಃ.

**ಹನ್ನೊಂದನೆಯ ದಳದಲ್ಲಿ ಗಾಯತ್ರೀ ಮಂತ್ರದ ಹನ್ನೊಂದನೆಯ ವರ್ಣ** ನಿಯಾಮಕನಾದ, ತ್ವಷ್ಟ್ರಂತರ್ಗತ ಬುದ್ಧಿಪತಿ ಪದ್ಮನಾಭಾಯ ನಮಃ.

**ಹನ್ನೆರಡನೆಯ ದಳದಲ್ಲಿ ಗಾಯತ್ರೀ ಮಂತ್ರದ ಹನ್ನೆರಡನೆಯ ವರ್ಣ ನಿಯಾಮಕನಾದ, ಪೂಷಾಂತರ್ಗತ ಇಂದಿರಾ ಶ್ರೀ ದಾಮೋದರಾಯ ನಮಃ.**

**ಹದಿಮೂರನೆಯ ದಳದಲ್ಲಿ ಗಾಯತ್ರೀ ಮಂತ್ರದ ಹದಿಮೂರನೆಯ ವರ್ಣ ನಿಯಾಮಕನಾದ, ಚಂದ್ರಾಂತರ್ಗತ ಹರಿಣೀಪತಿ ಶ್ರೀ ಸಂಕರ್ಷಣಾಯ ನಮಃ.**

**ಹದಿನಾಲ್ಕನೆಯ ದಳದಲ್ಲಿ ಗಾಯತ್ರೀ ಮಂತ್ರದ ಹದಿನಾಲ್ಕನೆಯ ವರ್ಣ ನಿಯಾಮಕನಾದ, ಅಗ್ನ್ಯಂತರ್ಗತ ದಕ್ಷಿಣಾ ವಾಸುದೇವಾಯ ನಮಃ.**

**ಹದಿನೈದನೆಯ ದಳದಲ್ಲಿ ಗಾಯತ್ರೀ ಮಂತ್ರದ ಹದಿನೈದನೆಯ ವರ್ಣ ನಿಯಾಮಕನಾದ, ವಾಯ್ವಂತರ್ಗತ ನಿತ್ಯಾಪ್ರದ್ಯುಮ್ನಾಯ ನಮಃ.**

**ಹದಿನಾರನೆಯದಳದಲ್ಲಿ ಗಾಯತ್ರೀ ಮಂತ್ರದ ಹದಿನಾರನೆಯವರ್ಣ ನಿಯಾಮಕನಾದ, ಮಿತ್ರಾ ವರುಣಾಂತರ್ಗತ ಆನಂದಾ ಅನಿರುದ್ಧಾಯ ನಮಃ.**

**ಹದಿನೇಳನೆಯ ದಳದಲ್ಲಿ ಗಾಯತ್ರೀ ಮಂತ್ರದ ಹದಿನೇಳನೆಯ ವರ್ಣ ನಿಯಾಮಕನಾದ, ಭ್ರಾತೃದೇವಾಂತರ್ಗತ ಸದಾಶ್ರಯಾ ಪುರುಷೋತ್ತಮಾಯ ನಮಃ.**

**ಹದಿನೆಂಟನೆಯದಳದಲ್ಲಿ ಗಾಯತ್ರೀ ಮಂತ್ರದ ಹದಿನೆಂಟನೆಯವರ್ಣ ನಿಯಾಮಕನಾದ, ವಿಶ್ವೇದೇವಾಂತರ್ಗತ ಶುಚಿಅಧೋಕ್ಷಜಾಯ ನಮಃ.**

**ಹತ್ತೊಂಬತ್ತನೆಯ ದಳದಲ್ಲಿ ಗಾಯತ್ರೀ ಮಂತ್ರದ ಹತ್ತೊಂಬತ್ತನೆಯ ವರ್ಣ ನಿಯಾಮಕನಾದ, ವಿಷ್ಣುಅಭಿನ್ನ, ಶ್ರೀ ಯಜ್ಞೇಶೀ ನಾರಸಿಂಹಾಯ ನಮಃ.**

**ಇಪ್ಪತ್ತನೆಯ ದಳದಲ್ಲಿ ಗಾಯತ್ರೀ ಮಂತ್ರದ ಇಪ್ಪತ್ತನೆಯ ವರ್ಣ ನಿಯಾಮಕನಾದ, ವಸ್ವಂತರ್ಗತ ಸುಖಿನೀ ಅಚ್ಯುತಾಯ ನಮಃ.**

**ಇಪ್ಪತ್ತೊಂದನೆಯ ದಳದಲ್ಲಿ ಗಾಯತ್ರೀ ಮಂತ್ರದ ಇಪ್ಪತ್ತೊಂದನೆಯ ವರ್ಣ ನಿಯಾಮಕನಾದ, ತ್ವಾಷ್ಟ್ರ ದೇವಾಂತರ್ಗತ ಸೌಗಂಧೀ ಜನಾರ್ದನಾಯ ನಮಃ.**

**ಇಪತ್ತೆರಡನೆಯ ದಳದಲ್ಲಿ ಗಾಯತ್ರೀ ಮಂತ್ರದ ಇಪತ್ತೆರಡನೆಯ ವರ್ಣ ನಿಯಾಮಕನಾದ, ಕುಬೇರಾಂತರ್ಗತ ಸುಂದರೀ ಶ್ರೀ ಉಪೇಂದ್ರಾಯ ನಮಃ.**

**ಇಪ್ಪತ್ತಮೂರನೆಯ ದಳದಲ್ಲಿ ಗಾಯತ್ರೀ ಮಂತ್ರದ ಇಪ್ಪತ್ತಮೂರನೆಯ ವರ್ಣ ನಿಯಾಮಕನಾದ, ದಸ್ರಾಂತರ್ಗತ ವಿದ್ಯಾ ಹರಯೇ ನಮಃ.**

**ಇಪ್ಪತ್ತನಾಲ್ಕನೆಯ ದಳದಲ್ಲಿ ಗಾಯತ್ರೀ ಮಂತ್ರದ ಇಪ್ಪತ್ತನಾಲ್ಕನೆಯ ವರ್ಣ ನಿಯಾಮಕನಾದ, ಬ್ರಹ್ಮಾಂತರ್ಗತ ಸುಶೀಲಾ ಶ್ರೀ ಕೃಷ್ಣಾಯ ನಮಃ.**


**ಪ್ರಾರ್ಥನೆ –:**
**ಹೇ ಸ್ವಾಮೀ ಗಾಯತ್ರೀ ಮಂತ್ರದ ಪ್ರತಿಯೊಂದು ವರ್ಣ ನಿಯಾಮಕರಾದ, ದೇವತೆಗಳೊಳಗೆ ನೀನೆ ಇದ್ದು, 24 ತತ್ವಗಳನ್ನು ಪ್ರಚೋದನೆ ಮಾಡುವುದರ ಮೂಲಕ ನಮಗೆ ದುಷ್ಟ ಬುದ್ಧ್ಯಾದಿಗಳನ್ನು ಬಿಡಿಸಿ ಭಕ್ತಿಪೂರ್ವಕವಾದ, ಆದರದಿಂದ ಕೂಡಿದ ನಿನ್ನ ಪಾದ ಚಿಂತನೆಯನ್ನು ಸದಾ ದಯಪಾಲಿಸು ಹರಿಯೇ. ನನ್ನ ಎಲ್ಲಾ ಇಂದ್ರಿಯಗಳಿಗೂ ನೀನೇ ವಿಷಯನಾಗು, ಬೇರೇ ಕಡೆಗೆ ಮನಸ್ಸು ಹೋಗಲೀಸಬೇಡ ಹರಿಯೇ.**

---

------------------------------------

# ಇಪ್ಪತ್ತ ನಾಲ್ಕು ದಳದ ಮೇಲಿನ ಮನೆಯ ಚಿಂತನೆ

------------------------------------



**ಮತ್ತೆ ಸೂರ್ಯನ ಗಮನ ।**
**ಭೇದದಿಂದಲಿ ತಿಳಿ ನವವೀಥಿಯ ।**
**ಐದಿಸು ಒಂದೊಂದು ಕಡೆ ಮೂರರ ಪ್ರಕಾರ ।**
**ಆದಾವಿಲ್ಲಿಗೆ ತಾರೆ ಇಪ್ಪತ್ತೇಳು ।**
**ಐದೇಳು ರಾಶಿಗಳು ಹಂಚಿ ಹಾಕಲಾಗಿ ।**
**ಪಾದ ಪಾದಾರ್ಧ ತ್ರಿಪಾದವಹುದು ।**
**ಪಾದತ್ರಿಮಂತ್ರ ತತ್ಸವಿತುಃ ವರೇಣ್ಯಂ ಭ- ।**
**ಗೋರ್ದೇವಸ್ಯ ಧೀಮಹಿ ಧಿಯೋಯೋನಃ ಪ್ರಚೋದಯಾ- ।**
**ದಾದಿ ಮೂರುತಿ ನಮ್ಮ ವಿಜಯ ವಿಠ್ಠಲನ ಶ್ರೀ- ।**
**ಪಾದವ ನೆರೆನಂಬು ಓಂ ಕಾರ ನುಡಿಯುತ್ತಾ ॥5॥**

ಇಪ್ಪತ್ತು ನಾಲ್ಕು ದಳದ ಮೇಲಿನ ಮೊದಲನೆಯ ವಲಯದಲ್ಲಿರುವ, 60 ಸಂವತ್ಸರಾಭಿಮಾನಿ ಭಗವದ್ರೂಪಗಳಿಗೆ ನಮೋ ನಮಃ.

ಎರಡನೆಯವಲಯದಲ್ಲಿರುವ, ಮೇಷ ಮೊದಲಾದ 12 ರಾಶಿಗಳಿಗೆ ಪ್ರವರ್ತಕವಾದ, ಭಗವದ್ರೂಪಗಳಿಗೆ ನಮೋ ನಮಃ.

ಮೂರನೆಯ ವಲಯದಲ್ಲಿ–

ಅಶ್ವಿನೀ ಮೊದಲನೆಯಪಾದ ಪ್ರವರ್ತಕ ಚೂಚೇಕಾಯ ನಮೋ ನಮಃ.
ಅಶ್ವಿನೀ ಎರಡನೆಯಪಾದ ಪ್ರವರ್ತಕ ಚೇಷ್ಟಕಾಯ ನಮೋ ನಮಃ.
ಅಶ್ವಿನೀ ಮೂರನೆಯಪಾದ ಪ್ರವರ್ತಕ ಚೋದಕಾಯ ನಮೋ ನಮಃ.
ಅಶ್ವಿನೀ ನಾಲ್ಕನೆಯಪಾದ ಪ್ರವರ್ತಕ ಲಕ್ಷಣಾಯ ನಮೋ ನಮಃ.

ಭರಣೀ ಮೊದಲನೆಯಪಾದ ಪ್ರವರ್ತಕ ಲೀನಾಯ ನಮೋ ನಮಃ.
ಭರಣೀ ಎರಡನೆಯಪಾದ ಪ್ರವರ್ತಕ ಲೂನಾಯ ನಮೋ ನಮಃ.
ಭರಣೀ ಮೂರನೆಯಪಾದ ಪ್ರವರ್ತಕ ಲೇಶಾಯ ನಮೋ ನಮಃ.
ಭರಣೀ ನಾಲ್ಕನೆಯಪಾದ ಪ್ರವರ್ತಕ ಲೋಕಾಯ ನಮೋ ನಮಃ.

ಕೃತ್ತಿಕಾ ಮೊದಲನೆಯಪಾದ ಪ್ರವರ್ತಕ ಅಜಾಯ ನಮೋ ನಮಃ.
ಕೃತ್ತಿಕಾ ಎರಡನೆಯಪಾದ ಪ್ರವರ್ತಕ ಇಂದ್ರಾಯ ನಮೋ ನಮಃ.
ಕೃತ್ತಿಕಾ ಮೂರನೆಯಪಾದ ಪ್ರವರ್ತಕ ಊರ್ಜಾಯ ನಮೋ ನಮಃ.
ಕೃತ್ತಿಕಾ ನಾಲ್ಕನೆಯಪಾದ ಪ್ರವರ್ತಕ ಏಕಾಯ ನಮೋ ನಮಃ.

ರೋಹಿಣೀ ಮೊದಲನೆಯಪಾದ ಪ್ರವರ್ತಕ ಓಜಸೆ ನಮೋ ನಮಃ.
ರೋಹಿಣೀ ಎರಡನೆಯಪಾದ ಪ್ರವರ್ತಕ ವರಾಯ ನಮೋ ನಮಃ.
ರೋಹಿಣೀ ಮೂರನೆಯಪಾದ ಪ್ರವರ್ತಕ ವೀರಾಯ ನಮೋ ನಮಃ.
ರೋಹಿಣೀ ನಾಲ್ಕನೆಯಪಾದ ಪ್ರವರ್ತಕ ವೂಢಾಯ ನಮೋ ನಮಃ.

ಮೃಗಶಿರಾ ಮೊದಲನೆಯಪಾದ ಪ್ರವರ್ತಕ ವೇದಾಯ ನಮೋ ನಮಃ.
ಮೃಗಶಿರಾ ಎರಡನೆಯಪಾದ ಪ್ರವರ್ತಕ ವೋಲ್ಲಹಾಯ ನಮೋ ನಮಃ.
ಮೃಗಶಿರಾ ಮೂರನೆಯಪಾದ ಪ್ರವರ್ತಕ ಕಚಾಯ ನಮೋ ನಮಃ.
ಮೃಗಶಿರಾ ನಾಲ್ಕನೆಯಪಾದ ಪ್ರವರ್ತಕ ಕೀಶಾಯ ನಮೋ ನಮಃ.

ಆರ್ದ್ರಾ ಮೊದಲನೆಯಪಾದ ಪ್ರವರ್ತಕ ಕೂಟಾಯ ನಮೋ ನಮಃ.
ಆರ್ದ್ರಾ ಎರಡನೆಯಪಾದ ಪ್ರವರ್ತಕ ಧರ್ಮಾಯ ನಮೋ ನಮಃ.
ಆರ್ದ್ರಾ ಮೂರನೆಯಪಾದ ಪ್ರವರ್ತಕ ಙಮಾಯ ನಮೋ ನಮಃ.
ಆರ್ದ್ರಾ ನಾಲ್ಕನೆಯಪಾದ ಪ್ರವರ್ತಕ ಛತ್ರಾಯ ನಮೋ ನಮಃ.

ಪುನರ್ವಸು ಮೊದಲನೆಯಪಾದ ಪ್ರವರ್ತಕ ಕೇಶಾಯ ನಮೋ ನಮಃ.
ಪುನರ್ವಸು ಎರಡನೆಯಪಾದ ಪ್ರವರ್ತಕ ಕೋಶಾಯ ನಮೋ ನಮಃ.
ಪುನರ್ವಸು ಮೂರನೆಯಪಾದ ಪ್ರವರ್ತಕ ಹರಯೇ ನಮೋ ನಮಃ.
ಪುನರ್ವಸು ನಾಲ್ಕನೆಯಪಾದ ಪ್ರವರ್ತಕ ಹೀರಾಯ ನಮೋ ನಮಃ.

ಪುಷ್ಯ ಮೊದಲನೆಯಪಾದ ಪ್ರವರ್ತಕ ಹುತಾಯ ನಮೋ ನಮಃ.
ಪುಷ್ಯ ಎರಡನೆಯಪಾದ ಪ್ರವರ್ತಕ ಹೇಳಾಯ ನಮೋ ನಮಃ.
ಪುಷ್ಯ ಮೂರನೆಯಪಾದ ಪ್ರವರ್ತಕ ಹೋಳಾಯ ನಮೋ ನಮಃ.
ಪುಷ್ಯ ನಾಲ್ಕನೆಯಪಾದ ಪ್ರವರ್ತಕ ಡಾಕಾಯ ನಮೋ ನಮಃ.

ಆಶ್ಲೇಷಾ ಮೊದಲನೆಯಪಾದ ಪ್ರವರ್ತಕ ಡಿಂಡಿಮಾಯ ನಮೋ ನಮಃ.
ಆಶ್ಲೇಷಾ ಎರಡನೆಯಪಾದ ಪ್ರವರ್ತಕ ಡುಂಡುಮಾಯ ನಮೋ ನಮಃ.
ಆಶ್ಲೇಷಾ ಮೂರನೆಯಪಾದ ಪ್ರವರ್ತಕ ಡೇರಾಯ ನಮೋ ನಮಃ.
ಆಶ್ಲೇಷಾ ನಾಲ್ಕನೆಯಪಾದ ಪ್ರವರ್ತಕ ಡೋರಾಯ ನಮೋ ನಮಃ.

ಮಖಾ ಮೊದಲನೆಯಪಾದ ಪ್ರವರ್ತಕ ಮನವೇ ನಮೋ ನಮಃ.
ಮಖಾ ಎರಡನೆಯಪಾದ ಪ್ರವರ್ತಕ ಮಿತ್ರಾಯ ನಮೋ ನಮಃ.
ಮಖಾ ಮೂರನೆಯಪಾದ ಪ್ರವರ್ತಕ ಮೂಕಾಯ ನಮೋ ನಮಃ.
ಮಖಾ ನಾಲ್ಕನೆಯಪಾದ ಪ್ರವರ್ತಕ ಮೇಘಾಯ ನಮೋ ನಮಃ.

ಪೂರ್ವಫಾಲ್ಗುಣೀ ಮೊದಲನೆಯಪಾದ ಪ್ರವರ್ತಕ ಮೋಘಾಯ ನಮೋ ನಮಃ.
ಪೂರ್ವಫಾಲ್ಗುಣೀ ಎರಡನೆಯಪಾದ ಪ್ರವರ್ತಕ ಟಂಕಾಯ ನಮೋ ನಮಃ.
ಪೂರ್ವಫಾಲ್ಗುಣೀ ಮೂರನೆಯಪಾದ ಪ್ರವರ್ತಕ ಟೀರಾಯ ನಮೋ ನಮಃ.
ಪೂರ್ವಫಾಲ್ಗುಣೀ ನಾಲ್ಕನೆಯಪಾದ ಪ್ರವರ್ತಕ ಟೂರಾಯ ನಮೋ ನಮಃ.

ಉತ್ತರಫಾಲ್ಗುಣೀ ಮೊದಲನೆಯಪಾದ ಪ್ರವರ್ತಕ ಟೇಕಾಯ ನಮೋ ನಮಃ.
ಉತ್ತರಫಾಲ್ಗುಣೀ ಎರಡನೆಯಪಾದ ಪ್ರವರ್ತಕ ಟೋಕಾಯ ನಮೋ ನಮಃ.
ಉತ್ತರಫಾಲ್ಗುಣೀ ಮೂರನೆಯಪಾದ ಪ್ರವರ್ತಕ ಪರಾಯ ನಮೋ ನಮಃ.
ಉತ್ತರಫಾಲ್ಗುಣೀ ನಾಲ್ಕನೆಯಪಾದ ಪ್ರವರ್ತಕ ಪೀನಾಯ ನಮೋ ನಮಃ.

ಹಸ್ತಾ ಮೊದಲನೆಯಪಾದ ಪ್ರವರ್ತಕ ಪೂರವೇ ನಮೋ ನಮಃ.
ಹಸ್ತಾ ಎರಡನೆಯಪಾದ ಪ್ರವರ್ತಕ ಷಡ್ಗುಣಾಯ ನಮೋ ನಮಃ.
ಹಸ್ತಾ ಮೂರನೆಯಪಾದ ಪ್ರವರ್ತಕ ಣಾತ್ಮನೇ ನಮೋ ನಮಃ.
ಹಸ್ತಾ ನಾಲ್ಕನೆಯಪಾದ ಪ್ರವರ್ತಕ ಠಕಳಾಯ ನಮೋ ನಮಃ.

ಚಿತ್ತಾ ಮೊದಲನೆಯಪಾದ ಪ್ರವರ್ತಕ ಪೇಶಾಯ ನಮೋ ನಮಃ.
ಚಿತ್ತಾ ಎರಡನೆಯಪಾದ ಪ್ರವರ್ತಕ ಪೋಶಾಯ ನಮೋ ನಮಃ.
ಚಿತ್ತಾ ಮೂರನೆಯಪಾದ ಪ್ರವರ್ತಕ ರಾಮಾಯ ನಮೋ ನಮಃ.
ಚಿತ್ತಾ ನಾಲ್ಕನೆಯಪಾದ ಪ್ರವರ್ತಕ ರಿಖಾಯ ನಮೋ ನಮಃ.

ಸ್ವಾತೀ ಮೊದಲನೆಯಪಾದ ಪ್ರವರ್ತಕ ರೂಢಾಯ ನಮೋ ನಮಃ.
ಸ್ವಾತೀ ಎರಡನೆಯಪಾದ ಪ್ರವರ್ತಕ ರೇಫಾಯ ನಮೋ ನಮಃ.
ಸ್ವಾತೀ ಮೂರನೆಯಪಾದ ಪ್ರವರ್ತಕ ರೋಧಸೇ ನಮೋ ನಮಃ.
ಸ್ವಾತೀ ನಾಲ್ಕನೆಯಪಾದ ಪ್ರವರ್ತಕ ತಾರಾಯ ನಮೋ ನಮಃ.

ವಿಶಾಖಾ ಮೊದಲನೆಯಪಾದ ಪ್ರವರ್ತಕ ತೀಕ್ಷ್ಣಾಯ ನಮೋ ನಮಃ.
ವಿಶಾಖಾ ಎರಡನೆಯಪಾದ ಪ್ರವರ್ತಕ ತೂದಾಯ ನಮೋ ನಮಃ.
ವಿಶಾಖಾ ಮೂರನೆಯಪಾದ ಪ್ರವರ್ತಕ ತೇಜಸೇ ನಮೋ ನಮಃ.
ವಿಶಾಖಾ ನಾಲ್ಕನೆಯಪಾದ ಪ್ರವರ್ತಕ ತೋಕಾಯ ನಮೋ ನಮಃ.

ಅನುರಾಧಾ ಮೊದಲನೆಯಪಾದ ಪ್ರವರ್ತಕ ನರಾಯ ನಮೋ ನಮಃ.
ಅನುರಾಧಾ ಎರಡನೆಯಪಾದ ಪ್ರವರ್ತಕ ನೀಲಾಯ ನಮೋ ನಮಃ.
ಅನುರಾಧಾ ಮೂರನೆಯಪಾದ ಪ್ರವರ್ತಕ ನೂನಾಯ ನಮೋ ನಮಃ.
ಅನುರಾಧಾ ನಾಲ್ಕನೆಯಪಾದ ಪ್ರವರ್ತಕ ನೇಯಾಯ ನಮೋ ನಮಃ.

ಜ್ಯೇಷ್ಠ ಮೊದಲನೆಯಪಾದ ಪ್ರವರ್ತಕ ನೋದಾಯ ನಮೋ ನಮಃ.
ಜ್ಯೇಷ್ಠ ಎರಡನೆಯಪಾದ ಪ್ರವರ್ತಕ ಯಜ್ಞಾಯ ನಮೋ ನಮಃ.
ಜ್ಯೇಷ್ಠ ಮೂರನೆಯಪಾದ ಪ್ರವರ್ತಕ ಯೀಡಾಯ ನಮೋ ನಮಃ.
ಜ್ಯೇಷ್ಠ ನಾಲ್ಕನೆಯಪಾದ ಪ್ರವರ್ತಕ ಯೂಢಾಯ ನಮೋ ನಮಃ.

ಮೂಲಾ ಮೊದಲನೆಯಪಾದ ಪ್ರವರ್ತಕ ಯೇಜಾಯ ನಮೋ ನಮಃ.
ಮೂಲಾ ಎರಡನೆಯಪಾದ ಪ್ರವರ್ತಕ ಯೋಗಾಯ ನಮೋ ನಮಃ.
ಮೂಲಾ ಮೂರನೆಯಪಾದ ಪ್ರವರ್ತಕ ಭಾಲಾಯ ನಮೋ ನಮಃ.
ಮೂಲಾ ನಾಲ್ಕನೆಯಪಾದ ಪ್ರವರ್ತಕ ಭೀಲಾಯ ನಮೋ ನಮಃ.

ಪೂರ್ವಾಷಾಢಾ ಮೊದಲನೆಯಪಾದ ಪ್ರವರ್ತಕ ಬೂದಾಯ ನಮೋ ನಮಃ.
ಪೂರ್ವಾಷಾಢಾ ಎರಡನೆಯಪಾದ ಪ್ರವರ್ತಕ ಧಾರಾಯ ನಮೋ ನಮಃ.
ಪೂರ್ವಾಷಾಢಾ ಮೂರನೆಯಪಾದ ಪ್ರವರ್ತಕ ಭಾರಾಯ ನಮೋ ನಮಃ.
ಪೂರ್ವಾಷಾಢಾ ನಾಲ್ಕನೆಯಪಾದ ಪ್ರವರ್ತಕ ಢರಾಯ ನಮೋ ನಮಃ.

ಉತ್ತರಾಷಾಢಾ ಮೊದಲನೆಯಪಾದ ಪ್ರವರ್ತಕ ಬೇರಾಯ ನಮೋ ನಮಃ.
ಉತ್ತರಾಷಾಢಾ ಎರಡನೆಯಪಾದ ಪ್ರವರ್ತಕ ಬೊಧಾಯ ನಮೋ ನಮಃ.
ಉತ್ತರಾಷಾಢಾ ಮೂರನೆಯಪಾದ ಪ್ರವರ್ತಕ ಜಯಾಯ ನಮೋ ನಮಃ.
ಉತ್ತರಾಷಾಢಾ ನಾಲ್ಕನೆಯಪಾದ ಪ್ರವರ್ತಕ ಜಿನಾಯ ನಮೋ ನಮಃ.

ಶ್ರವಣಾ ಮೊದಲನೆಯಪಾದ ಪ್ರವರ್ತಕ ಜೂರಾಯ ನಮೋ ನಮಃ.
ಶ್ರವಣಾ ಎರಡನೆಯಪಾದ ಪ್ರವರ್ತಕ ಜೇತವೇ ನಮೋ ನಮಃ.
ಶ್ರವಣಾ ಮೂರನೆಯಪಾದ ಪ್ರವರ್ತಕ ಜೋಷಾಯ ನಮೋ ನಮಃ.
ಶ್ರವಣಾ ನಾಲ್ಕನೆಯಪಾದ ಪ್ರವರ್ತಕ ಖರಾಯ ನಮೋ ನಮಃ.

ಧನಿಷ್ಠಾ ಮೊದಲನೆಯಪಾದ ಪ್ರವರ್ತಕ ಗಮ್ಯಾಯ ನಮೋ ನಮಃ.
ಧನಿಷ್ಠಾ ಎರಡನೆಯಪಾದ ಪ್ರವರ್ತಕ ಗೀತಾಯ ನಮೋ ನಮಃ.
ಧನಿಷ್ಠಾ ಮೂರನೆಯಪಾದ ಪ್ರವರ್ತಕ ಗೂಢಾಯ ನಮೋ ನಮಃ.
ಧನಿಷ್ಠಾ ನಾಲ್ಕನೆಯಪಾದ ಪ್ರವರ್ತಕ ಗೇಯಾಯ ನಮೋ ನಮಃ.

ಶತಭಿಷಾ ಮೊದಲನೆಯಪಾದ ಪ್ರವರ್ತಕ ಗೋಪ್ತ್ರಾಯ ನಮೋ ನಮಃ.
ಶತಭಿಷಾ ಎರಡನೆಯಪಾದ ಪ್ರವರ್ತಕ ಸತ್ಯಾಯ ನಮೋ ನಮಃ.
ಶತಭಿಷಾ ಮೂರನೆಯಪಾದ ಪ್ರವರ್ತಕ ಸಿದ್ಧಾಯ ನಮೋ ನಮಃ.
ಶತಭಿಷಾ ನಾಲ್ಕನೆಯಪಾದ ಪ್ರವರ್ತಕ ಸೂತಾಯ ನಮೋ ನಮಃ.

ಪೂರ್ವಾಭಾದ್ರ ಮೊದಲನೆಯಪಾದ ಪ್ರವರ್ತಕ ಸೇವ್ಯಾಯ ನಮೋ ನಮಃ.
ಪೂರ್ವಾಭಾದ್ರ ಎರಡನೆಯಪಾದ ಪ್ರವರ್ತಕ ಸೋಮಾಯ ನಮೋ ನಮಃ.
ಪೂರ್ವಾಭಾದ್ರ ಮೂರನೆಯಪಾದ ಪ್ರವರ್ತಕ ದಮಾಯ ನಮೋ ನಮಃ.
ಪೂರ್ವಾಭಾದ್ರ ನಾಲ್ಕನೆಯಪಾದ ಪ್ರವರ್ತಕ ದೀನಾಯ ನಮೋ ನಮಃ.

ಉತ್ತರಾಭಾದ್ರ ಮೊದಲನೆಯಪಾದ ಪ್ರವರ್ತಕ ದೂರಾಯ ನಮೋ ನಮಃ.
ಉತ್ತರಾಭಾದ್ರ ಎರಡನೆಯಪಾದ ಪ್ರವರ್ತಕ ಶಂಭವೇ ನಮೋ ನಮಃ.
ಉತ್ತರಾಭಾದ್ರ ಮೂರನೆಯಪಾದ ಪ್ರವರ್ತಕ ಝಭಾಯ ನಮೋ ನಮಃ.
ಉತ್ತರಾಭಾದ್ರ ನಾಲ್ಕನೆಯಪಾದ ಪ್ರವರ್ತಕ ಥಭಾಯ ನಮೋ ನಮಃ.

ರೇವತೀ ಮೊದಲನೆಯಪಾದ ಪ್ರವರ್ತಕ ದೇವಾಯ ನಮೋ ನಮಃ.
ರೇವತೀ ಎರಡನೆಯಪಾದ ಪ್ರವರ್ತಕ ದೋರಾಯ ನಮೋ ನಮಃ.
ರೇವತೀ ಮೂರನೆಯಪಾದ ಪ್ರವರ್ತಕ ಚರಾಯ ನಮೋ ನಮಃ.
ರೇವತೀ ನಾಲ್ಕನೆಯಪಾದ ಪ್ರವರ್ತಕ ಚಿರಾಯ ನಮೋ ನಮಃ.

**ಪ್ರಾರ್ಥನೆ –:**
ಎಲ್ಲಾ ನಕ್ಷತ್ರಗಳ ಅಭಿಮಾನಿ ದೇವತೆಗಳು ಭಕ್ತಿಯಿಂದ ಭಜಿಸುವ ನಕ್ಷತ್ರ, ಪಾದ, ಪ್ರವರ್ತಕ 108 ಭಗವದ್ರೂಪಗಳಿಗೆ ನಮೋ ನಮಃ.

**ನಂತರ ವಲಯದಲ್ಲಿರುವ**, ಅಶ್ವಿನ್ಯಾದಿ ನಕ್ಷತ್ರಗಳಿಗೂ, ವಿಷ್ಕಂಭಾದಿ ಯೋಗಗಳಿಗೂ ಪ್ರವರ್ತಕವಾದ, ದೇವತೆಗಳಿಗೂ ಅವರಂತರ್ಗತ ಭಗವದ್ರೂಪಗಳಿಗೂ ನಮೋ ನಮಃ.

**ಮಂಡಲದ ಆಗ್ನೇಯ ದಿಕ್ಕಿನಲ್ಲಿ** ವಿರಾಜಮಾನವಾದ, ಸೂರ್ಯನ ರಥ ಸಂಚಾರಕ್ಕೆ ಅವಕಾಶ ಕೊಡುವ ನಾಗವೀಥೀ, ಗಜವೀಥೀ, ಐರಾವತವೀಥೀ ಎಂಬ ವೀಥಿಗಳಲ್ಲಿರುವ, ಆಯಾ ಅಭಿಮಾನಿ ದೇವತಾಂತರ್ಗತ ನಾಗವೀಥೀ, ಗಜವೀಥೀ, ಐರಾವತವೀಥೀ ಎಂದು

ಹೆಸರಿಟ್ಟುಕೊಂಡ ವೀಥೀ ನಿಯಾಮಕವಾದ, ಭಗವದ್ರೂಪಗಳಿಗೆ ನಮೋ ನಮಃ.

ಮಂಡಲದ ಪಶ್ಚಿಮ ದಿಕ್ಕಿನಲ್ಲಿ ವಿರಾಜಮಾನವಾದ, ಸೂರ್ಯನ ರಥ ಸಂಚಾರಕ್ಕೆ ಅವಕಾಶ ಕೊಡುವ ವೃಷಭವೀಥೀ, ಗೋವೀಥೀ, ಜಾರದ್ಗವವೀಥೀ ಎಂಬ ವೀಥಿಗಳಲ್ಲಿರುವ, ಆಯಾ ಅಭಿಮಾನಿ ದೇವತಾಂತರ್ಗತ ವೃಷಭವೀಥೀ, ಗೋವೀಥೀ, ಜಾರದ್ಗವವೀಥೀ ಎಂದು ಹೆಸರಿಟ್ಟುಕೊಂಡ ವೀಥೀ ನಿಯಾಮಕವಾದ, ಭಗವದ್ರೂಪಗಳಿಗೆ ನಮೋ ನಮಃ.

ಮಂಡಲದ ಐಶಾನ್ಯ ದಿಕ್ಕಿನಲ್ಲಿ ವಿರಾಜಮಾನವಾದ, ಸೂರ್ಯನ ರಥ ಸಂಚಾರಕ್ಕೆ ಅವಕಾಶ ಕೊಡುವ ಅಜವೀಥೀ, ಮೃಗವೀಥೀ, ವೈಶ್ವಾನರವೀಥೀ ಎಂಬ ವೀಥಿಗಳಲ್ಲಿರುವ, ಆಯಾ ಅಭಿಮಾನಿ ದೇವತಾಂತರ್ಗತ ಅಜವೀಥೀ, ಮೃಗವೀಥೀ, ವೈಶ್ವಾನರವೀಥೀ ಎಂದು ಹೆಸರಿಟ್ಟುಕೊಂಡ ವೀಥೀ ನಿಯಾಮಕವಾದ, ಭಗವದ್ರೂಪಗಳಿಗೆ ನಮೋ ನಮಃ.


ವೀಥೀ ನಾಮಕನಾದ, ಹೇ ಭಗವಂತ ಆಯಾ ದೇವತೆಗಳಂತರ್ಗತ ನಿನ್ನ ಸ್ಮರಣೆಯಿಂದ ನನ್ನ ಜೀವನದ ಗಮನ ಕೇವಲ ನಿನ್ನ ಪ್ರೀತಿಗಾಗಲಿ ಹರಿಯೇ. ಅಲ್ಲಿ ಬರುವ ಏರುಪೇರುಗಳೆಲ್ಲಾ ನಿನ್ನ ಪೂಜೆಯೆಂದು ಚಿಂತಿಸುವ ಸೌಭಾಗ್ಯಕೊಡು. ಇಲ್ಲಿ ಬರುವ ಎಲ್ಲಾ ಭಗವದ್ರೂಪಗಳಿಂದ ಅಭಿನ್ನನಾದ ನನ್ನ ಬಿಂಬ ಮೂರ್ತಿಗೆ ನಮೋ ನಮಃ

---

---

# ಐವತ್ತೊಂದು ದಳದ ಚಿಂತನೆ

---



**ಅಟ್ಟತಾಳ**

**ಇದರ ಮೇಲೇ ಏಕ ಪಂಚಾಶದ್ದಳವುಳ್ಳ ।**
**ಪದುಮವ ಬರೆದು ಪ್ರದಕ್ಷಿಣೆ ಮಾಡಿ ।**
**ಮುದದಿಂದ ದ್ವಿರಷ್ಟ ಮಿಕ್ಕ ಮೂವತ್ತೈದು ।**
**ಇದೆ ಇದೆ ದಳದೊಳು ಅಪಿಸಿ ಅಜಾದಿಯ ।**
**ವೊದಗಿ ಸ್ತೋತ್ರವ ಮಾಡು ವರ್ಣದೇವತವೆಂದು ।**
**ತುದಿ ಮೊದಲಿದರ ವಿಸ್ತಾರವೆ ಈ ಪರಿ ।**
**ಇದೆ ಚಕ್ರಾಂಬುಜವೆಂದು ಕರೆಸುತಿಪ್ಪುದು ।**
**ಹೃದಯಾಕಾಶ–ವಾರಿ–ಸ್ಥಂಡಿಲ–ಗಗನ–ಸೂರ್ಯ ।**

ವಿಧುಮಂಡಲ ಸಮಸ್ತ ಉತ್ತಮಸ್ಥಾನ ।
ಇದೆ ನಿರ್ಮಾಣ ಮಾಡಿ ಸತ್ಕರ್ಮದಲಿ ನಿತ್ಯ ।
ಪದೋಪದಿಗೆ ಶ್ರೀಹರಿಯ ಧ್ಯಾನ ಮಾಡಲಿಬೇಕು ।
ಇದರೊಳು ಏಳುಕೋಟಿ ಮಂತ್ರಾರ್ಥವೆ ಉಂಟು ।
ಆಧಿದೈವ ಆಧಿಭೂತ ಅಧ್ಯಾತ್ಮವೇ ಉಂಟು ।
ಅಧಿಕಾರತನ ಭೇದ ತಿಳಕೊಂಬ ಜೀವಿಗಳಿಗೆ ।
ಸದಮಲಾನಂದ ನಮ್ಮ ವಿಜಯ ವಿಠ್ಠಲರೇಯ ।
ಬದಿಯಲ್ಲಿ ಇರುತಿಪ್ಪ ಚಕ್ರಾಬ್ಜ ಬಲ್ಲವನಿಗೆ ॥6॥

**1. ಮೊದಲನೆಯ ದಳದಲ್ಲಿ** ವಿರಾಜಮಾನನಾದ, ಶಿರಸ್ಸಿನಲ್ಲಿ ನಿಂತಿರುವ, 'ಅ' ಎಂಬ ವರ್ಣ ಪ್ರತಿಪಾದ್ಯನಾದ, ಅಜಾಯ ನಮಃ.

**2. ಎರಡನೆಯ ದಳದಲ್ಲಿ** ವಿರಾಜಮಾನನಾದ, ಮುಖದಲ್ಲಿ ನಿಂತಿರುವ, 'ಆ' ಎಂಬ ವರ್ಣ ಪ್ರತಿಪಾದ್ಯನಾದ, ಆನಂದಾಯನಮಃ.

**3. ಮೂರನೆಯ ದಳದಲ್ಲಿ** ವಿರಾಜಮಾನನಾದ, ಬಲ ಕಣ್ಣಿನಲ್ಲಿ ನಿಂತಿರುವ, 'ಇ' ಎಂಬ ವರ್ಣ ಪ್ರತಿಪಾದ್ಯನಾದ, ಇಂದ್ರಾಯನಮಃ.

**4. ನಾಲ್ಕನೆಯ ದಳದಲ್ಲಿ** ವಿರಾಜಮಾನನಾದ, ಎಡ ಕಣ್ಣಿನಲ್ಲಿ ನಿಂತಿರುವ, 'ಈ' ಎಂಬ ವರ್ಣ ಪ್ರತಿಪಾದ್ಯನಾದ, ಈಶಾನಾಯನಮ

**5. ಐದನೆಯ ದಳದಲ್ಲಿ** ವಿರಾಜಮಾನನಾದ, ಬಲಗಿವಿಯಲ್ಲಿ ನಿಂತಿರುವ, 'ಉ' ಎಂಬ ವರ್ಣ ಪ್ರತಿಪಾದ್ಯನಾದ, ಉಗ್ರಾಯನಮಃ.

**6. ಆರನೆಯ ದಳದಲ್ಲಿ** ವಿರಾಜಮಾನನಾದ, ಎಡಗಿವಿಯಲ್ಲಿ ನಿಂತಿರುವ, 'ಊ' ಎಂಬ ವರ್ಣ ಪ್ರತಿಪಾದ್ಯನಾದ, ಊರ್ಜಾಯನಮಃ.

**7. ಏಳನೆಯ ದಳದಲ್ಲಿ** ವಿರಾಜಮಾನನಾದ, ಬಲ ಮೂಗಿನ ಹೊಳ್ಳೆಯಲ್ಲಿ ನಿಂತಿರುವ, 'ಋ' ಎಂಬ ವರ್ಣ ಪ್ರತಿಪಾದ್ಯನಾದ, ಋತಂಭರಾಯನಮಃ.

**8. ಎಂಟನೆಯ ದಳದಲ್ಲಿ** ವಿರಾಜಮಾನನಾದ, ಎಡ ಮೂಗಿನ ಹೊಳ್ಳೆಯಲ್ಲಿ 'ೠ' ಎಂಬ ವರ್ಣ ಪ್ರತಿಪಾದ್ಯನಾದ, ೠಘಾಯನಮಃ.

**9. ಒಂಬತ್ತನೆಯ ದಳದಲ್ಲಿ** ವಿರಾಜಮಾನನಾದ, ಬಲಗೆನ್ನೆಯಲ್ಲಿ ನಿಂತಿರುವ, 'ಲೃ' ಎಂಬ ವರ್ಣ ಪ್ರತಿಪಾದ್ಯನಾದ, ಲೃಶಾಯನಮಃ.

**10. ಹತ್ತನೆಯ ದಳದಲ್ಲಿ** ವಿರಾಜಮಾನನಾದ, ಎಡಗೆನ್ನೆಯಲ್ಲಿ ನಿಂತಿರುವ, 'ಲೄ' ಎಂಬ ವರ್ಣ ಪ್ರತಿಪಾದ್ಯನಾದ, ಲೄಜಯೇನಮಃ.

**11. ಹನ್ನೊಂದನೆಯ ದಳದಲ್ಲಿ** ವಿರಾಜಮಾನನಾದ, ಮೇಲಿನತುಟಿಯಲ್ಲಿ ನಿಂತಿರುವ, 'ಏ' ಎಂಬ ವರ್ಣ ಪ್ರತಿಪಾದ್ಯನಾದ, ಏಕಾತ್ಮನೇನಮಃ.

**12. ಹನ್ನೆರಡನೆಯ ದಳದಲ್ಲಿ** ವಿರಾಜಮಾನನಾದ, ಕೆಳತುಟಿಯಲ್ಲಿ ನಿಂತಿರುವ, 'ಐ' ಎಂಬ ವರ್ಣ ಪ್ರತಿಪಾದ್ಯನಾದ, ಐರಾಯನಮಃ.

**13. ಹದಿಮೂರನೆಯ ದಳದಲ್ಲಿ** ವಿರಾಜಮಾನನಾದ, ಮೇಲಿನ ದಂತಪಂಕ್ತಿಯಲ್ಲಿ ನಿಂತಿರುವ, 'ಓ' ಎಂಬ ವರ್ಣ ಪ್ರತಿಪಾದ್ಯನಾದ, ಓಜೋಭೃತೇನಮಃ.

**14. ಹದಿನಾಲ್ಕನೆಯ ದಳದಲ್ಲಿ** ವಿರಾಜಮಾನನಾದ, ಕೆಳದಂತಪಂಕ್ತಿಯಲ್ಲಿ ನಿಂತಿರುವ, 'ಔ' ಎಂಬ ವರ್ಣ ಪ್ರತಿಪಾದ್ಯನಾದ, ಔರಸಾಯನಮಃ.

**15. ಹದಿನೈದನೆಯ ದಳದಲ್ಲಿ** ವಿರಾಜಮಾನನಾದ, ಬಾಯಿ ಒಳಗಿನ ಮೇಲ್ಭಾಗದಲ್ಲಿ ನಿಂತಿರುವ, 'ಅಂ' ಎಂಬ ವರ್ಣ ಪ್ರತಿಪಾದ್ಯನಾದ, ಅಂತಾಯನಮಃ.

**16. ಹದಿನಾರನೆಯ ದಳದಲ್ಲಿ** ವಿರಾಜಮಾನನಾದ, ಬಾಯಿ ಒಳಗಿನ ಕೆಳಭಾಗದಲ್ಲಿ 'ಅಃ' ಎಂಬ ವರ್ಣ ಪ್ರತಿಪಾದ್ಯನಾದ, ಅರ್ಧಗರ್ಭಾಯನಮಃ.

**17. ಹದಿನೇಳನೆಯ ದಳದಲ್ಲಿ** ವಿರಾಜಮಾನನಾದ, ಬಲಗೈ ಮೊದಲನೆಯಸಂಧಿಯಲ್ಲಿ ನಿಂತಿರುವ, 'ಕ' ಎಂಬ ವರ್ಣ ಪ್ರತಿಪಾದ್ಯನಾದ, ಕಪಿಲಾಯನಮಃ.

**18. ಹದಿನೆಂಟನೆಯ ದಳದಲ್ಲಿ** ವಿರಾಜಮಾನನಾದ, ಬಲಗೈ ಎರಡನೆಯ ಸಂಧಿಯಲ್ಲಿ ನಿಂತಿರುವ, 'ಖ' ಎಂಬ ವರ್ಣ ಪ್ರತಿಪಾದ್ಯನಾದ, ಖಪತಯೇನಮಃ.

**19. ಹತ್ತೊಂಬತ್ತನೆಯ ದಳದಲ್ಲಿ** ವಿರಾಜಮಾನನಾದ, ಬಲಗೈ ಮೂರನೆಯ ಸಂಧಿಯಲ್ಲಿ ನಿಂತಿರುವ, 'ಗ' ಎಂಬ ವರ್ಣ ಪ್ರತಿಪಾದ್ಯನಾದ, ಗರುಡಾಸನಾಯನಮಃ.

20. ಇಪ್ಪತನೆಯ ದಳದಲ್ಲಿ ವಿರಾಜಮಾನನಾದ, ಬಲಗೈ ನಾಲ್ಕನೆಯ ಸಂಧಿಯಲ್ಲಿ ನಿಂತಿರುವ, 'ಘ' ಎಂಬ ವರ್ಣ ಪ್ರತಿಪಾದ್ಯನಾದ, ಘರ್ಮಾಯನಮಃ.

21. ಇಪ್ಪತ್ತೊಂದನೆ ದಳದಲ್ಲಿ ವಿರಾಜಮಾನನಾದ, ದಕ್ಷಿಣ ಬಾಹುವಿನ ಅಗ್ರದಲ್ಲಿ ನಿಂತಿರುವ, 'ಙ' ಎಂಬ ವರ್ಣ ಪ್ರತಿಪಾದ್ಯನಾದ, ಙಸಾರಾಯನಮಃ.

22. ಇಪ್ಪತ್ತ ಎರಡನೆಯ ದಳದಲ್ಲಿ ವಿರಾಜಮಾನನಾದ, ವಾಮ ಬಾಹು ಮೊದಲನೆಯ ಸ್ಕಂದದಲ್ಲಿರುವ ನಿಂತಿರುವ, 'ಚ' ಎಂಬ ವರ್ಣ ಪ್ರತಿಪಾದ್ಯನಾದ, ಚಾರ್ವಂಗಾಯನಮಃ.

23. ಇಪ್ಪತ್ತ ಮೂರನೆಯ ದಳದಲ್ಲಿ ವಿರಾಜಮಾನನಾದ, ವಾಮಬಾಹು ಎರಡನೆಯ ಸ್ಕಂದದಲ್ಲಿ ನಿಂತಿರುವ, 'ಛ' ಎಂಬ ವರ್ಣ ಪ್ರತಿಪಾದ್ಯನಾದ, ಛಂದೋಗಮ್ಯಾಯನಮಃ.

24. ಇಪ್ಪತ್ತ ನಾಲ್ಕನೆಯ ದಳದಲ್ಲಿ ವಿರಾಜಮಾನನಾದ, ವಾಮಬಾಹು ಮೂರನೆಯ ಸ್ಕಂದದಲ್ಲಿ ನಿಂತಿರುವ, 'ಜ' ಎಂಬ ವರ್ಣ ಪ್ರತಿಪಾದ್ಯನಾದ, ಜನಾರ್ದನಾಯನಮಃ.

25. ಇಪ್ಪತ್ತ ಐದನೆಯ ದಳದಲ್ಲಿ ವಿರಾಜಮಾನನಾದ, ವಾಮಬಾಹು ನಾಲ್ಕನೆಯ ಸ್ಕಂದದಲ್ಲಿ ನಿಂತಿರುವ, 'ಝ' ಎಂಬ ವರ್ಣ ಪ್ರತಿಪಾದ್ಯನಾದ, ಝೂಟಿತಾರಯೇನಮಃ.

26. ಇಪ್ಪತ್ತ ಆರನೆಯ ದಳದಲ್ಲಿ ವಿರಾಜಮಾನನಾದ, ವಾಮಬಾಹು ಅಗ್ರದಲ್ಲಿ ನಿಂತಿರುವ, 'ಞ' ಎಂಬ ವರ್ಣ ಪ್ರತಿಪಾದ್ಯನಾದ, ಞಮಾಯನಮಃ.

27. ಇಪ್ಪತ್ತ ಏಳನೆಯ ದಳದಲ್ಲಿ ವಿರಾಜಮಾನನಾದ, ದಕ್ಷಿಣಪಾದ ಮೊದಲನೆಯ ಸ್ಕಂದದಲ್ಲಿ ನಿಂತಿರುವ, 'ಟ' ಎಂಬ ವರ್ಣ ಪ್ರತಿಪಾದ್ಯನಾದ, ಟಂಕಿನೇನಮಃ.

28. ಇಪ್ಪತ್ತ ಎಂಟನೆಯ ದಳದಲ್ಲಿ ವಿರಾಜಮಾನನಾದ, ದಕ್ಷಿಣಪಾದ ಎರಡನೆಯಸ್ಕಂದದಲ್ಲಿ ನಿಂತಿರುವ, 'ಠ' ಎಂಬ ವರ್ಣ ಪ್ರತಿಪಾದ್ಯನಾದ, ಠಳಕಾಯನಮಃ.

**29. ಇಪ್ಪತ್ತ ಒಂಬತ್ತನೆಯ ದಳದಲ್ಲಿ** ವಿರಾಜಮಾನನಾದ, ದಕ್ಷಿಣಪಾದ ತೃತೀಯ ಸ್ಕಂದದಲ್ಲಿ ನಿಂತಿರುವ, 'ಡ' ಎಂಬ ವರ್ಣ ಪ್ರತಿಪಾದ್ಯನಾದ, ಡರಕಾಯನಮಃ.

**30. ಮೂವತ್ತನೆಯ ದಳದಲ್ಲಿ** ವಿರಾಜಮಾನನಾದ, ದಕ್ಷಿಣಪಾದ ಚತುರ್ಥ ಸ್ಕಂದದಲ್ಲಿ ನಿಂತಿರುವ, 'ಢ' ಎಂಬ ವರ್ಣ ಪ್ರತಿಪಾದ್ಯನಾದ, ಢರಿಣೇನಮಃ.

**31. ಮೂವತ್ತೊಂದನೆಯ ದಳದಲ್ಲಿ** ವಿರಾಜಮಾನನಾದ, ದಕ್ಷಿಣಪಾದ ಅಗ್ರದಲ್ಲಿ ನಿಂತಿರುವ, 'ಣ' ಎಂಬ ವರ್ಣ ಪ್ರತಿಪಾದ್ಯನಾದ, ಣಾತ್ಮನೇನಮಃ.

**32. ಮೂವತ್ತ ಎರಡನೆಯ ದಳದಲ್ಲಿ** ವಿರಾಜಮಾನನಾದ, ವಾಮ ಪಾದ ಪ್ರಥಮ ಸ್ಕಂದದಲ್ಲಿ ನಿಂತಿರುವ, 'ತ' ಎಂಬ ವರ್ಣ ಪ್ರತಿಪಾದ್ಯನಾದ, ತಾರಾಯನಮಃ.

**33. ಮೂವತ್ತ ಮೂರನೆಯ ದಳದಲ್ಲಿ** ವಿರಾಜಮಾನನಾದ, ವಾಮ ಪಾದ ದ್ವಿತೀಯ ಸ್ಕಂದದಲ್ಲಿ ನಿಂತಿರುವ, 'ಥ' ಎಂಬ ವರ್ಣ ಪ್ರತಿಪಾದ್ಯನಾದ, ಥಬಾಯನಮಃ.

**34. ಮೂವತ್ತ ನಾಲ್ಕನೆಯ ದಳದಲ್ಲಿ** ವಿರಾಜಮಾನನಾದ, ವಾಮ ಪಾದ ತೃತೀಯ ಸ್ಕಂದದಲ್ಲಿ ನಿಂತಿರುವ, 'ದ' ಎಂಬ ವರ್ಣ ಪ್ರತಿಪಾದ್ಯನಾದ, ದಂಡಿನೇನಮಃ.

**35. ಮೂವತ್ತ ಐದನೆಯ ದಳದಲ್ಲಿ** ವಿರಾಜಮಾನನಾದ, ವಾಮ ಪಾದ ಚತುರ್ಥ ಸ್ಕಂದದಲ್ಲಿ ನಿಂತಿರುವ, 'ಧ' ಎಂಬ ವರ್ಣ ಪ್ರತಿಪಾದ್ಯನಾದ, ಧನ್ವಿನೇನಮಃ.

**36. ಮೂವತ್ತ ಆರನೆಯ ದಳದಲ್ಲಿ** ವಿರಾಜಮಾನನಾದ, ವಾಮ ಪಾದಾಗ್ರದಲ್ಲಿ ನಿಂತಿರುವ, 'ನ' ಎಂಬ ವರ್ಣ ಪ್ರತಿಪಾದ್ಯನಾದ, ನಮ್ಯಾಯನಮಃ.

**37. ಮೂವತ್ತ ಏಳನೆಯ** ದಳದಲ್ಲಿ ವಿರಾಜಮಾನನಾದ, ದಕ್ಷಿಣ ಪಾರ್ಶ್ವದಲ್ಲಿ ನಿಂತಿರುವ, 'ಪ' ಎಂಬ ವರ್ಣ ಪ್ರತಿಪಾದ್ಯನಾದ, ಪರಾಯನಮಃ.

**38. ಮೂವತ್ತ ಎಂಟನೆಯ ದಳದಲ್ಲಿ** ವಿರಾಜಮಾನನಾದ, ವಾಮ ಪಾರ್ಶ್ವದಲ್ಲಿ ನಿಂತಿರುವ, 'ಫ' ಎಂಬ ವರ್ಣ ಪ್ರತಿಪಾದ್ಯನಾದ, ಫಲಿನೇನಮಃ.

**39. ಮೂವತ್ತ ಒಂಬತ್ತನೆಯ** ದಳದಲ್ಲಿ ದಳದಲ್ಲಿ ವಿರಾಜಮಾನನಾದ, ಪೃಷ್ಠದಲ್ಲಿ ನಿಂತಿರುವ, 'ಬ' ಎಂಬ ವರ್ಣ ಪ್ರತಿಪಾದ್ಯನಾದ, ಬಲಿನೇನಮಃ.

**40. ನಲವತ್ತನೆಯ ದಳದಲ್ಲಿ** ವಿರಾಜಮಾನನಾದ, ಗುಹ್ಯದಲ್ಲಿ ನಿಂತಿರುವ, 'ಭ' ಎಂಬ ವರ್ಣ ಪ್ರತಿಪಾದ್ಯನಾದ, ಭಗಾಯನಮಃ.

**41. ನಲವತ್ತ ಒಂದನೆಯ** ದಳದಲ್ಲಿ ವಿರಾಜಮಾನನಾದ, ಉದರ/ತುಂದಿಯಲ್ಲಿ ನಿಂತಿರುವ, 'ಮ' ಎಂಬ ವರ್ಣ ಪ್ರತಿಪಾದ್ಯನಾದ, ಮನವೇನಮಃ.

**42. ನಲವತ್ತ ಎರಡನೆಯ ದಳದಲ್ಲಿ** ವಿರಾಜಮಾನನಾದ, ಹೃದಯದಲ್ಲಿ ನಿಂತಿರುವ, 'ಯ' ಎಂಬ ವರ್ಣ ಪ್ರತಿಪಾದ್ಯನಾದ, ಯಜ್ಞಾಯನಮಃ.

**43. ನಲವತ್ತ ಮೂರನೆಯ ದಳದಲ್ಲಿ** ವಿರಾಜಮಾನನಾದ, ತ್ವಕ್ಕಿನಲ್ಲಿ ನಿಂತಿರುವ, 'ರ' ಎಂಬ ವರ್ಣ ಪ್ರತಿಪಾದ್ಯನಾದ, ರಾಮಾಯನಮಃ.

**44. ನಲವತ್ತ ನಾಲ್ಕನೆಯ ದಳದಲ್ಲಿ** ವಿರಾಜಮಾನನಾದ, ಚರ್ಮದಲ್ಲಿ ನಿಂತಿರುವ, 'ಲ' ಎಂಬ ವರ್ಣ ಪ್ರತಿಪಾದ್ಯನಾದ, ಲಕ್ಷ್ಮೀಪತಯೇನಮಃ.

**45. ನಲವತ್ತ ಐದನೆಯ ದಳದಲ್ಲಿ** ವಿರಾಜಮಾನನಾದ, ಮಾಂಸದಲ್ಲಿ ನಿಂತಿರುವ, 'ವ' ಎಂಬ ವರ್ಣ ಪ್ರತಿಪಾದ್ಯನಾದ, ವರಾಯನಮಃ.

**46. ನಲವತ್ತ ಆರನೆಯ ದಳದಲ್ಲಿ** ವಿರಾಜಮಾನನಾದ, ರುಧಿರದಲ್ಲಿ ನಿಂತಿರುವ, 'ಶ' ಎಂಬ ವರ್ಣ ಪ್ರತಿಪಾದ್ಯನಾದ, ಶಾಂತಸಂವಿದೇನಮಃ.

**47. ನಲವತ್ತ ಏಳನೆಯ ದಳದಲ್ಲಿ** ವಿರಾಜಮಾನನಾದ, ಮೇಧಸ್ಸಿನಲ್ಲಿ ನಿಂತಿರುವ, 'ಷ' ಎಂಬ ವರ್ಣ ಪ್ರತಿಪಾದ್ಯನಾದ, ಷಡ್ಗುಣಾತ್ಮನೇನಮಃ.

**48. ನಲವತ್ತ ಎಂಟನೆಯ ದಳದಲ್ಲಿ** ವಿರಾಜಮಾನನಾದ, ಮಜ್ಜೆಯಲ್ಲಿ ನಿಂತಿರುವ, 'ಸ' ಎಂಬ ವರ್ಣ ಪ್ರತಿಪಾದ್ಯನಾದ, ಸಾರಾತ್ಮನೇನಮಃ.

**49. ನಲವತ್ತ ಒಂಬತ್ತನೆಯ ದಳದಲ್ಲಿ** ವಿರಾಜಮಾನನಾದ, ಅಸ್ತಿಗಳಲ್ಲಿ ನಿಂತಿರುವ, 'ಹ' ಎಂಬ ವರ್ಣ ಪ್ರತಿಪಾದ್ಯನಾದ, ಹಂಸಾಯನಮಃ.

**50. ಐವತ್ತನೆಯ ದಳದಲ್ಲಿ** ವಿರಾಜಮಾನನಾದ, ಪ್ರಾಣದಲ್ಲಿ ನಿಂತಿರುವ, 'ಳ' ಎಂಬ ವರ್ಣ ಪ್ರತಿಪಾದ್ಯನಾದ, ಳಾಳುಕಾಯನಮಃ.

**51. ಐವತ್ತೊಂದನೆಯ ದಳದಲ್ಲಿ ವಿರಾಜಮಾನನಾದ, ಜೀವನಲ್ಲಿ ನಿಂತಿರುವ, 'ಕ್ಷ' ಎಂಬ ವರ್ಣ ಪ್ರತಿಪಾದ್ಯನಾದ, ಲಕ್ಷ್ಮೀನರಸಿಂಹಾಯನಮಃ.**

**ಪ್ರಾರ್ಥನೆ –:**


**ಅಜಾದಿ ಮಾತೃಕಾ ರೂಪಿ ಹರಿಯೇ, ನಿನ್ನ ಈ ರೂಪಗಳಿಂದಲೇ ಜಗತ್ತಿನಲ್ಲಿರುವ, ಬ್ರಹ್ಮಾದಿ ಸಕಲ ಚೇತನರ ಕರ ಚರಣಾದಿ ಸಕಲ ವ್ಯಾಪಾರವೂ ಆಗುತ್ತದೆ. ಈ ರೂಪಗಳ ಕರುಣೆಯಿಂದಲೇ ಅಸ್ವತಂತ್ರತಮನಾದ, ನನ್ನ ಸಕಲ ಸಾಧನೆಯು ನಡೆಯುತ್ತಿದೆ ಎಂಬ ಚಿಂತನೆ ಸದಾ ದಯಪಾಲಿಸು ಹರಿಯೇ. ಬದುಕಿನ ಪ್ರತಿಯೊಂದು ಕ್ಷಣ ಆದರಪೂರ್ವಕವಾದ, ನಿನ್ನ ಕರುಣೆಯಿಂದ ಕೂಡಿದ ಉಪಕಾರದ, ನೆನಪು ಬಂದು, ಧನ್ಯತಾ ಭಾವದಿಂದ ಮೈಮರೆಯುವ ಭಾಗ್ಯವನ್ನು, ಅದಕ್ಕೆ ಕಾರಣವಾದ, ಮಹಾತ್ಮರ ವಿಶಿಷ್ಟ ಸೇವೆಯನ್ನು ದಯಪಾಲಿಸಿ ಉದ್ಧರಿಸು ಹರಿಯೇ, ಬೇರಿನ್ಯಾವುದು ನಾನೆಂದು ಬೇಡುವುದಿಲ್ಲ.**

---

---------------

# ಚಕ್ರಾಬ್ಜ ಮಂಡಲ

---------------




## ಆದಿತಾಳ

ಸ್ನಾನ ಉದಕ ಆಚಮನಿಯ ಸಂಧ್ಯಾರ್ಘ ತ್ರಿಪದ ।
ಎಣಿಸುವಾಗ ನಾನಾ ಮಂತ್ರ ಜಪಿಸುವಾಗ ।
ಮೇಣು ಅರ್ಚಾ ಅರ್ಚನೆ ಪಾವಕಾಹುತಿ ಯಜ್ಞ ।
ಕ್ಷೋಣಿ ಸುರರ ಪೂಜೆ ಆತ್ಮ ಸಂತೋಷ ಅನ್ನ ।
ಪಾನಾದಿ ಕೊಡುವಾಗ ಇದನೆ ಚಿಂತಿಸಬೇಕು ।
ಏನೆಂಬೆನಯ್ಯ ಅವ ಅಪರೋಕ್ಷಿ ಎಂದಿಗೇ ।
ಧ್ಯಾನಸಂಪೂರ್ಣ ಸಿದ್ಧ ಜ್ಞಾನವಂತನಾಹಾ ।
ಪ್ರಾಣರಾಗಿ ಇಪ್ಪರು ಹರಿ–ಸಿರಿ–ಪ್ರಾಣಾದ್ಯರು ।

ಕಾಣಿಸಿ ಕೊಂಬರು ಒಂದೊಂದು ಮಂಡಲದಲ್ಲಿ ।
ಆನಂದ ಗತಿಗೆ ಸಾಧನ ಬೇಕಾದರೆ ।
ಮಾನವಾ ಇದನೆ ಕೈಕೊಂಡು ಆಲೋಚಿಸು ।
ಸ್ಥಾನಸ್ಥಾನಕೆ ನಿನಗೆ ಶುಭವಕ್ಕು ಪುಸಿ ಅಲ್ಲ ।
ದೀನನಾಥನಾದ ವಿಜಯವಿಠ್ಠಲರೇಯನ್ನ ।
ಗಾನವ ಮಾಡಿರೊ ಗ್ರಹಿಸಿ ಈ ಪರಿಯಿಂದ ॥7॥

**ಜತೆ**

ಸಿದ್ಧ ಸಾಧನವಿದು ಬಿಂಬ ಕಾಣುವುದಕ್ಕೆ
ಪದ್ಮಿವಲ್ಲಭ ನಮ್ಮ ವಿಜಯವಿಠ್ಠಲ ಪ್ರಾಪ್ತಿ ॥8॥

ಮಮ ಸ್ವಾಮೀ ಹರಿರ್ನಿತ್ಯಂ ಸರ್ವಸ್ಯ ಪತಿರೇವ ಚ ಎಂಬ ಮಹಾ ಮಂತ್ರದ ಅನುಸಂಧಾನ ರೂಪವಾದ, ಈ ಚಕ್ರಾಬ್ಜಮಂಡಲದ ಚಿಂತನೆಯು ಸಕಲ ಕಾರ್ಯಗಳಲ್ಲಿ ಬರುವಂತೆ ಮಾಡು ಹರಿಯೇ.

***



**ಸಿದ್ಧ ಸಾಧನವಿದು ಬಿಂಬ ಕಾಣುವುದಕ್ಕೆ**
**ಪದ್ಮಿವಲ್ಲಭ ನಮ್ಮ ವಿಜಯವಿಠ್ಠಲ ಪ್ರಾಪ್ತಿ**